ಶ್ರೀ ರಾಮಚಂದ್ರ ಮಿಷನ್®

ECHOES ಇಂಡಿಯಾ ವಾರ್ತಾಪತ್ರ



# 2015

## ನವವರ್ಷದ ಸಂದೇಶ

*"ನಾವೆಲ್ಲರೂ 'ನೀವು ಏನಾಗಿದ್ದೀರಿ?' ಎಂದು ಕೇಳಲ್ಪಟ್ಟಾಗ, 'ನಾನೊಬ್ಬ ಅಭ್ಯಾಸಿ' ಎಂದು ನಮ್ಮನ್ನು ಪರಿಚಯಿಸಿಕೊಳ್ಳಬೇಕೆಂದು ನಾನು ಆಶಿಸುತ್ತೇನೆ, ಏಕೆಂದರೆ ನನ್ನ ಜೀವನದಲ್ಲಿ, ನನ್ನ ಹೃದಯದಲ್ಲಿ ಅದೇ ಪ್ರಾಥಮಿಕ ವಿಷಯ. ನಾನು ಒಬ್ಬ ಅಭ್ಯಾಸಿ ಎಂಬುದು ನಮ್ಮ ಹೃದಯದಲ್ಲಿ ಶಾಶ್ವತವಾಗಿ ಅಚ್ಚೊತ್ತಿರಬೇಕು. ಅವರ ಪ್ರಿಯ ಸ್ಮರಣೆಯಿಲ್ಲದೆ ಒಂದು ಕ್ಷಣವೂ ಕಳೆದುಹೋಗದು, ವ್ಯರ್ಥವಾದ ಕ್ಷಣಕ್ಕಾಗಿ ಪರಿತಪಿಸುವಂತಿರಬೇಕು ಎಂಬಷ್ಟರ ಮಟ್ಟಿಗೆ ಪ್ರತಿಯೊಂದು ಕ್ಷಣವೂ ಅದು ಅಚ್ಚೊತ್ತಿರಬೇಕು, ಇಲ್ಲವಾದರೆ, ವರ್ಷಾನುವರ್ಷಗಳು ಹಾರಿಹೋಗುವವು, ಜೀವನವು ಮರುಭೂಮಿಗಳಲ್ಲಿ ವ್ಯರ್ಥವಾಗುವ ನದಿಗಳಂತೆ ತೇಲಿಹೋಗುವುದು. ನಮ್ಮ ಜೀವನವೂ ಕಾಲದ ಈ ಅನಂತ ಸಾಗರದಲ್ಲಿ ಕಾಣೆಯಾಗುವುದು."*

:ಕಮಲೇಶ್ ಡಿ. ಪಟೇಲ್, ಜನವರಿ 1, 2015

## ಮಣಪಾಕ್ಕಂ ವರ್ತಮಾನ

### ಅಕ್ಟೋಬರ್, 2014

ಅಕ್ಟೋಬರ್ 1ರ ಬುಧವಾರ, ಗುರುಗಳು ಗಾಲಿಕುರ್ಚಿಯಲ್ಲಿ ಹೊರಬಂದು, 2ನೇ ತಾರೀಕಿಗೆ ಆರಂಭವಾಗುವ ಐದು ದಿನಗಳ ಚೀನೀ ವಿಚಾರಸಂಕಿರಣದಲ್ಲಿ ಭಾಗವಹಿಸಲೆಂದು ಬಂದಿದ್ದ ಸುಮಾರು 20 ಮಂದಿ ಹೊಸ ಅಭ್ಯಾಸಿಗಳನ್ನು ಭೇಟಿಯಾದರು. ತಾರೀಕು 4ರಂದು ಸಾಯಂಕಾಲ 6 ಗಂಟೆಗೆ ಗುರುಗಳು, ಕುಟೀರದ ಪ್ರವೇಶಭಾಗದಲ್ಲಿ ನೆರೆದ, ಚೀನಾ ಹಾಗೂ ದ. ಆಫ್ರಿಕಾದಿಂದ ಬಂದ ಅಭ್ಯಾಸಿಗಳ ಜೊತೆಗೆ ಸುಮಾರು ಒಂದು ಗಂಟೆ ಕಾಲ ಕಳೆದರು. ಭಾಷಾಂತರ ಮಾಡುತ್ತಿದ್ದ ಸೋದರರೊಬ್ಬರ ಸಹಾಯದಿಂದ ಅವರು ಅಭ್ಯಾಸಿಗಳೊಂದಿಗೆ ಕಲೆಯಲು ಸಾಧ್ಯವಾಯಿತು. ನಂತರ ಸಮನ್ವಯಕಾರರು ಅಭ್ಯಾಸಿಗಳನ್ನು ಗುರುಗಳಿಗೆ ಪರಿಚಯಿಸಿದರು. ಒಬ್ಬ ಅಭ್ಯಾಸಿಯು ಕೊಳಲಿನಲ್ಲಿ ಎರಡು ಹಾಡುಗಳನ್ನು ವಿಶಿಷ್ಟವಾದ ಚೀನೀ ಶೈಲಿಯಲ್ಲಿ ನುಡಿಸಿದರು. ಗುರುಗಳು ಹಾಗೂ ಸುತ್ತಲಿದ್ದ ಎಲ್ಲರೂ ಅದನ್ನು ಆಸ್ವಾದಿಸಿದರು. ಇದಾದ ನಂತರ ಗುರುಗಳು ಸಾಕಷ್ಟು ಬಳಲಿ ಆಮೇಲೆ ನೇರವಾಗಿ ವಿಶ್ರಾಂತಿಗೆಂದು ತೆರಳಿದರು.

### ಆಸ್ಟ್ರೇಲಿಯಾ ವಿಚಾರ ಸಂಕಿರಣ

5ರಂದು ಬ್ರಿಸ್‌ಬೇನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿಚಾರಸಂಕಿರಣದೊಂದಿಗೆ ವೀಡಿಯೊ ಸಮಾಲೋಚನೆಯ ಅವಧಿಯಲ್ಲಿ ಸೋ. ಕಮಲೇಶ್‌ರವರು, ಗುರುಗಳು ಶಾರೀರಿಕವಾಗಿ ಕಷ್ಟಪಡುತ್ತಿದ್ದರೂ, ಉತ್ಸಾಹಪೂರ್ಣ ಸಮ್ಮತಿಯಿಂದ ತನ್ನ ಕರ್ತವ್ಯಗಳನ್ನು ಮಾಡಲು ಸಮರ್ಥರಾಗಿದ್ದು, ಮತ್ತು ಹೀಗೆ ಮಾಡುವಲ್ಲಿ ತನ್ನ ಸುತ್ತಲಿದ್ದವರೆಲ್ಲರಿಗೆ ಹರ್ಷ ಭಾವ ಹಾಗೂ ಆಧ್ಯಾತ್ಮಿಕ ಉಚ್ಛ್ರಾಯವನ್ನು ತಂದಿದ್ದಾರೆಂದರು. ಗುರುಗಳು ಶಾರೀರಿಕ ಅಸ್ವಸ್ಥತೆಯಿದ್ದರೂ, ಆಶ್ರಮದಲ್ಲಿ ಹತ್ತಿರವಿರುವವರಿಗೆ ಅಥವಾ ಬೇರೆಡೆ ದೂರದಲ್ಲಿರುವವರಿಗೆ ಆಧ್ಯಾತ್ಮಿಕ ಸೇವೆ ನೀಡುವ ಬಗ್ಗೆ ಯಾವತ್ತೂ ಆತಂಕಿತರಾಗಿದ್ದರು. ಗುರುಗಳ ಅಸ್ವಾಸ್ಥ್ಯಕ್ಕೆ ಸಂಬಂಧಿಸಿದ ಕೆಲವು ತರದ ಚಿಕಿತ್ಸೆಗಳು ಅವರನ್ನು ಅತಿಯೆನಿಸುವಷ್ಟು ಸೋಂಕುಗಳಿಗೆ ಗುರಿಯಾಗಿಸುವುದರಿಂದ, ಅಂದರೆ ಆ ಮೂಲಕ ಅಭ್ಯಾಸಿಗಳನ್ನು ಭೇಟಿಯಾಗಲು ಅವರನ್ನು ಅಶಕ್ತರನ್ನಾಗಿಸುವುದರಿಂದ ಅವರು ಅವುಗಳನ್ನು ತಡೆಯುತ್ತಿದ್ದಾರೆಂದು ಸೋದರ ಕಮಲೇಶ್‌ರವರು ತಿಳಿಸಿದಾಗ ಅಭ್ಯಾಸಿಗಳ ಮನಸ್ಸು ಆಳವಾಗಿ ಕೊರಗಿತ್ತು.



ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ



'ಹರ್ಷದಿಂದ ಧ್ಯಾನಿಸಿ' ಎಂಬ ವಸ್ತುವಿನ ಮೇಲಿನ ಮೇಲೆ ಬ್ರಿಸ್‌ಬೇನ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಸುಮಾರು ನೂರು ಅಭ್ಯಾಸಿಗಳು ಮತ್ತು ಅವರ ಮಕ್ಕಳು ಸೇರಿದ್ದರು.

**ಚೀನೀ ವಿಚಾರ ಸಂಕಿರಣ**

ಪೂರ್ವಾಹ್ನ ಸುಮಾರು 11 ಗಂಟೆಗೆ ಗುರುಗಳು ಹೊರಗೆ ಕುಟೀರದ ಮುಂಭಾಗಕ್ಕೆ ಬಂದರು, ಚೀನೀ ಅಭ್ಯಾಸಿಗಳೊಂದಿಗೆ ಅವರ ಛಾಯಾಚಿತ್ರವನ್ನು ತೆಗೆಯಲಾಯಿತು. ಅಕ್ಟೋಬರ್ 6ರ ಸೋಮವಾರ ಚೀನೀ ವಿಚಾರ ಸಂಕಿರಣದ ಕೊನೆಯ ದಿನವಾಗಿದ್ದು ಸೋ. ಕಮಲೇಶ್‌ರವರು ಮುಕ್ತಾಯದ ಸತ್ಸಂಗವನ್ನು ನಡೆಸಿಕೊಟ್ಟರು.

ಅಕ್ಟೋಬರ್ ಎರಡನೇ ವಾರದಲ್ಲಿ ಗುರುಗಳ ನಿತ್ಯಕ್ರಮವು ಸ್ವಲ್ಪ ಬದಲಾಯಿತು. ಅವರು ಕೆಲ ದಿನಗಳಲ್ಲಿ ತೀರಾ ತಡವಾಗಿ ಅಂದರೆ ಪೂರ್ವಾಹ್ನ 9.30 ಹಾಗೂ ಕೆಲವು ದಿನಗಳಂದು 10.00 ಗಂಟೆಯ ನಂತರವೂ ಏಳುತ್ತಿದ್ದರು. ಉಪಾಹಾರ ಸೇವಿಸಿ, ವಾರ್ತೆಗಳನ್ನು ಕೇಳುತ್ತ ಸ್ವಲ್ಪ ಹೊತ್ತು ಕಳೆಯುತ್ತಿದ್ದರು. ಒಂದೆರಡು ದಿ



ನಗಳಲ್ಲಿ ಹೊರಬಂದು ಬಿಸಿಲಿನಲ್ಲಿ ಕುಳಿತುಕೊಂಡರು. ಆನಂತರ ವಿಶ್ರಾಂತಿ ತೆಗೆದುಕೊಳ್ಳಲು ಹೋಗುತ್ತಿದ್ದರು, ಅಪರಾಹ್ನ ಸುಮಾರು 3.00 ಗಂಟೆಗೆ ಎದ್ದು ಮಧ್ಯಾಹ್ನದ ಆಹಾರ ಸೇವಿಸುತ್ತಿದ್ದರು. ಅಪರಾಹ್ನ ಸ್ವಲ್ಪಹೊತ್ತು ದೂರದರ್ಶನ ಕಾರ್ಯಕ್ರಮ ನೋಡುತ್ತಿದ್ದರು ಅಥವಾ ಒಂದು ಪುಸ್ತಕ ಓದಿಸಿ ಕೇಳುತ್ತಿದ್ದರು ಮತ್ತು ಸಾಯಂಕಾಲ ತ.ಡವಾಗಿ ಹೊರಗೆ ಬರುತ್ತಿದ್ದರು. ಹೆಚ್ಚಿನ ಕಾಲ, ಗುರುಗಳು ಮೌನವಾಗಿರುತ್ತಿದ್ದರು– ಅಭ್ಯಾಸಿಗಳನ್ನು ಭೇಟಿಯಾಗುವ ಸಮಯವೂ ಅವರನ್ನು ಕೇವಲ ಆಶೀರ್ವದಿಸುತ್ತಿದ್ದರು.

ಅಕ್ಟೋಬರ್ 7ರ ಮಂಗಳವಾರ, ಮೊದಲೊಮ್ಮೆ ಪಿಯಾನೊ ನುಡಿಸಿದ್ದ, ಒಮೆಗಾ ವಿದ್ಯಾಲಯದ ಬಾಲಕಿಯೊಬ್ಬಳು ಬಂದು ಮತ್ತೊಮ್ಮೆ ಪಿಯಾನೊ ನುಡಿಸಿದಳು. ಗುರುಗಳು ಮೌನವಾಗಿ ಅದನ್ನು ಆಲಿಸುತ್ತ ಕುಳಿತಿದ್ದರು.

**ಅಮೇರಿಕ ವಿಚಾರ ಸಂಕಿರಣದೊಂದಿಗೆ ವೀಡಿಯೊ ಸಮಾಲೋಚನೆ:**

ಅಕ್ಟೋಬರ್ 11ರಂದು ಸೋದರ ಕಮಲೇಶ್ ಅನೌಪಚಾರಿಕವಾಗಿ ಗುರುಗಳಿಗೆ ಅಮೇರಿಕ ವಿಚಾರಸಂಕಿರಣದಲ್ಲಿ ಭಾಗವಹಿಸುವ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಲು ಒಂದು ವೀಡಿಯೊ ಸಮಾಲೋಚನೆಯನ್ನು ಇಟ್ಟುಕೊಳ್ಳುವ ಯೋಜನೆಯ ಬಗ್ಗೆ ತಿಳಿಸಿದರು. ಗುರುಗಳು ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಬಹುದೆ ಎಂದು ಸೋ. ಕಮಲೇಶ್ ಕೇಳಿದರು. ಗುರುಗಳು, "ಯಾಕಾಗಬಾರದು?" ಎಂದರು. ಸೋ. ಕಮಲೇಶ್, ಅಲ್ಲಿದ್ದ ಪ್ರತಿಯೊಬ್ಬರಿಗೂ ಇದೊಂದು ಅನಿರೀಕ್ಷಿತ ಆಶ್ಚರ್ಯವಾಗಿ, ಇಡಲು ಹೇಳಿದರು. ಆ ರಾತ್ರಿ ಭೋಜನಾನಂತರ ಗುರುಗಳು ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರು ತಮ್ಮ ಪರದೆಯ ಮೇಲೆ, ಮೊಲೆನಾ, ಮೊನ್ರೋ, ಸಾನ್ ಜೋಸ್, ಟೆಕ್ಸಾಸ್, ಇತ್ಯಾದಿ ದೊಡ್ಡ ಕೇಂದ್ರಗಳಲ್ಲಿನ ಅಭ್ಯಾಸಿಗಳನ್ನು ನೋಡಲು ಶಕ್ತರಾದರು. ಗುರುಗಳು ಸುಮಾರು 20–30 ನಿಮಿಷಗಳ ಕಾಲ ಒಂದು ಭಾಷಣವಿತ್ತರು. USA ಯ ಉದ್ದಗಲಕ್ಕೆ ಹರಡಿರುವ ಈ ಬಹು ದೊಡ್ಡಸಂಖ್ಯೆಯ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಲು ಅವರಿಗೆ ಸಂತೋಷವಾದಂತಿತ್ತು.

ಅಕ್ಟೋಬರ್ 10–12ರ ವಾರಾಂತ್ಯದಲ್ಲಿ ಸಂಯುಕ್ತ ಸಂಸ್ಥಾನಗಳ ಉದ್ದಗಲಕ್ಕೂ ಅಭ್ಯಾಸಿಗಳು 'ವಾತ್ಸಲ್ಯಮಯ ಹೃದಯವೊಂದನ್ನು ವಿನ್ಯಾಸಗೊಳಿಸುವುದು' ಎಂಬ ವಸ್ತುವಿನ ಮೇಲಿನ ರಾಷ್ಟ್ರೀಯ ವಿಚಾರಸಂಕಿರಣಕ್ಕಾಗಿ ಆರು ಸ್ಥಳಗಳಲ್ಲಿ ಒಟ್ಟು ಸೇರಿದ್ದರು. ಗುರುಗಳು ತನ್ನ ಭಾಷಣದಲ್ಲಿ, ನಾವೀಗ ನಮ್ಮ ಹೃದಯಗಳನ್ನು ಉಪಯೋಗಿಸುವಷ್ಟು ಪ್ರೌಢರಾಗಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕೆಂದು ಪ್ರತಿಯೊಬ್ಬರನ್ನೂ ಒತ್ತಾಯಿಸಿದರು. "ಅದನ್ನು ಉಪಯೋಗಿಸುವುದು ಹೇಗೆ?" ಒಂದೇ ವಿಧಾನವೆಂದರೆ ಪ್ರೀತಿಸುವುದು. ಹೃದಯವನ್ನು ಉಪಯೋಗಿಸುವಾಗ ನಾವೆಂದೂ ತಪ್ಪಾಗಲಾರೆವು. ಅದನ್ನು ಉಪಯೋಗಿಸಲು ನಾವು ಹೆದರಬಾರದು; ಅದು ಅಪಾಯಕರವಲ್ಲ. ಹೃದಯವಿಲ್ಲದೆ ಆಧ್ಯಾತ್ಮಿಕ ಜೀವನವೇ ಇಲ್ಲ ಎಂದು ಅವರು ಹೇಳಿದರು.

**ಅಕ್ಟೋಬರ್ 22–23, ದೀಪಾವಳಿ ಹಬ್ಬ:** ದಿನಾಂಕ 22ರಂದು ಸೋದರ ಕಮಲೇಶ್‌ರವರು ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ಬೆಳಗ್ಗೆ ತಡವಾಗಿ ಹೊರಬಂದರು, ಆದರೆ ತನಗೆ ಧ್ಯಾನಮಂದಿರಕ್ಕೆ ಹೋಗಲಾಗಿಲ್ಲ ಎಂಬುದಕ್ಕೆ ಅವರಲ್ಲಿ ಅಸಂತೋಷವಿತ್ತು. ಅಪರಾಹ್ನ ಅವರು, ಅವರ ಕ್ಷಣದರ್ಶನಕ್ಕಾಗಿ ಬೆಳಗಿನಿಂದಲೂ ಅಲ್ಲಿ ಕಾದುಕುಳಿತಿದ್ದ ಕೆಲ ಅಭ್ಯಾಸಿಗಳನ್ನು ಭೇಟಿಯಾದರು.

ಸಾಯಂಕಾಲ, ಗುರುಗಳು ಗಾಲ್ಫ್ ಗಾಡಿಯಲ್ಲಿ ಆಶ್ರಮದ ಸುತ್ತ ಹೊರಟರು. ಅಭ್ಯಾಸಿಗಳ ಗುಂಪು ಬಹಳ ದೊಡ್ಡದಿದ್ದು, ಗುರುಗಳನ್ನು ನೋಡಲು ನುಗ್ಗಾಟ ಆರಂಭವಾಗಿ ಅದನ್ನು ನಿಭಾಯಿಸುವುದು ಭದ್ರತಾವ್ಯವಸ್ಥೆಗೆ ತುಂಬ ಕಷ್ಟವಾಯಿತು. ಆದರೂ ಗುರುಗಳು ಬಹುಮಂದಿ ಅಭ್ಯಾಸಿಗಳನ್ನು ಭೇಟಿಯಾದರು. ಅಲ್ಲಿ ಅನೇಕರು ಕೇವಲ ತನ್ನನ್ನು ನೋಡುವ ಸಲುವಾಗಿಯೇ ಬಂದಿದ್ದುದರಿಂದ ತಾನು ಮತ್ತೆ ಹೊರಗೆ ಹೋಗಲು ಬಯಸುತ್ತೇನೆಂದು ಗುರುಗಳು ಎಲ್ಲರಲ್ಲಿ ಹೇಳುತ್ತಿದ್ದರು. ಗುರುವಾರ, ತನಗೆ ಹೊರಗೆ ಬರಲು ಆಗದಿದ್ದರೂ ಕುಟೀರದಲ್ಲಿ

ಅಭ್ಯಾಸಿಗಳನ್ನು ಭೇಟಿಯಾಗಲು ತಾನು ಲಭ್ಯನಾಗುವ ಹಾಗೆ ಗುರುಗಳು ನೋಡಿಕೊಂಡರು. ಕುಟೀರದೊಳಗೆ ಹಾಗೂ ಸರ್ವರ ಹೃದಯಗಳೊಳಗೆ ದಿ ೀಪಗಳು ಬೆಳಗಿದ್ದು ಅಲ್ಲಿ ಆನಂದಮಯ ಭಾವವಿತ್ತು.

**ಅಕ್ಟೋಬರ್ 24, ಶುಕ್ರವಾರ:** ಸಾಯಂಕಾಲ, ಧ್ಯಾನಮಂದಿರದಲ್ಲಿ ಗುಜರಾತ್‌ನಿಂದ ಬಂದ ಸೋದರಿಯರಿಂದ ಗರ್ಭಾ ನೃತ್ಯವಿತ್ತು; ಗುರುಗಳು ಅದನ್ನು ತನ್ನ ಕೊಠಡಿಯಲ್ಲಿ CCTVಯ ಮೂಲಕ ನೋಡಿದರು. ನೃತ್ಯವನ್ನು ಮಾಡಿದ ಸೋದರಿಯರು ಮತ್ತು ಮಕ್ಕಳು ಕುಟೀರಕ್ಕೆ ಗುರುಗಳನ್ನು ಭೇಟಿಯಾಗಲು ಬಂದರು. ಗುರುಗಳು ಎಲ್ಲರೊಂದಿಗೆ ಮಾತನಾಡುತ್ತ ನೃತ್ಯದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೆ ಉಡುಗೊರೆಯನ್ನು ನೀಡಿ, “ಈ ಉಡುಗೊರೆ ಅಮೂಲ್ಯವಾದುದು. ಅದನ್ನು ಕೊಟ್ಟುಬಿಡಬೇಡಿ” ಎಂದರು. ಅಭ್ಯಾಸಿಗಳು, “ಮಾಸ್ಟರ್, ನಮಗೆ ನೀವು ಅಮೂಲ್ಯ, ನೀವು ಕೊಟ್ಟ ಉಡುಗೊರೆಯೂ ಅಮೂಲ್ಯ” ಎನ್ನುತ್ತ ಪ್ರತಿಸ್ಪಂದಿಸಿದರು.

**ಅಕ್ಟೋಬರ್ 26, ರವಿವಾರ: ಗುರುಗಳು ಅಭ್ಯಾಸಿಗಳನ್ನುದ್ದೇಶಿಸಿ ಮಾತನಾಡಿದ್ದು:** ಅಮೇರಿಕ ವಿಚಾರಸಂಕಿರಣದಲ್ಲಿ ಬಹುಸಂಖ್ಯೆಯ ಅಭ್ಯಾಸಿಗಳನ್ನುದ್ದೇಶಿಸಿ ನೇರ ಪ್ರಸಾರದ ವೀಡಿಯೊ ಸಂಪರ್ಕದಲ್ಲಿ ಮಾತನಾಡಲು ಸಾಧ್ಯವಾದದ್ದು ಗುರುಗಳಿಗೆ ಸಂತೋಷವನ್ನು ತಂದಿದ್ದು ಅವರು, “ಇದನ್ನು ಇನ್ನೂ ಹೆಚ್ಚು ಮಾಡುವುದು ಚೆನ್ನಾಗಿರುತ್ತದೆ” ಎಂದರು. ಮರುದಿನವೇ ಸೋ. ಕಮಲೇಶ್ ಏರ್ಪಾಡುಗಳನ್ನು ಮಾಡಿ ಗುರುಗಳು ವೆಬ್‌ಕಾಸ್ಟ್ ನೇರ ಪ್ರಸಾರದ ಮೂಲಕ ಜಗತ್ತಿನೆಲ್ಲೆಡೆಯ ಎಲ್ಲ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡುವರೆಂದು ಪ್ರಕಟಿಸಿದರು.

ಗುರುಗಳು ಬೆಳಗ್ಗೆ ಸಾಕಷ್ಟು ಮುಂಚಿತವಾಗಿಯೇ ಸಿದ್ಧರಾಗಿದ್ದರು, ಆದರೆ ಬೆಳಗಿನ ಉಪಾಹಾರದ ಮೊದಲು ಅವರು, “ನಾನು ಎಲ್ಲ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಬೇಕಾಗಿದೆ, ಆದರೆ ನಾನು ಏನು ಹೇಳಹೋಗುತ್ತೇನೆಂದು ನನಗೆ ಗೊತ್ತಿಲ್ಲ. ಹೇಗಿದ್ದರೂ, ಏನಾದರೂ ಬರುವುದು” ಎಂದು ಮೇಲಕ್ಕೆ ಕೈ ತೋರಿಸಿ ಹೇಳುತ್ತಿದ್ದರು. ಆಶ್ರಮಗಳಲ್ಲಿ, ಮಿಷನ್ ಕೇಂದ್ರಗಳಲ್ಲಿ ಅಥವಾ ಮನೆಗಳಲ್ಲಿ ಸಂಪರ್ಕಿತರಾಗಿ ಅವರ ಮಾತುಗಳನ್ನು ಕೇಳಲು ಸಮಾವೇಶಗೊಂಡ, ಜಗತ್ತಿನೆಲ್ಲೆಡೆಯ ದೇಶಗಳಲ್ಲಿನ ಅಭ್ಯಾಸಿಗಳನ್ನು ಉದ್ದೇಶಿಸಿ ಗುರುಗಳು ಸುಮಾರು 50 ನಿಮಿಷಗಳ ಕಾಲ ಮಾತನಾಡಿದರು. ಭಾಷಣ ಮುಗಿದ ನಂತರ, ಗುರುಗಳ ಮುಖದಲ್ಲಿ ಸಮಾಧಾನದ ಭಾವವನ್ನು ಕಾಣಬಹುದಾಗಿತ್ತು; ಅವರು ಒಂದು ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿ ತಿಂಗಳುಗಳೇ ಕಳೆದಿದ್ದವು. ಭಾಷಣದ ನಂತರ ಗುರುಗಳು ಒಂದು ಗಂಟೆಯಕಾಲ ಹೊರಗೆ ಕುಳಿತಿದ್ದರು. ಈ ಸಂಗತಿಯ ನಂತರ, ಅಭ್ಯಾಸಿಗಳಿಗೆ ಹೇಗನಿಸಿತು ಹಾಗೂ ಭಾಷಣದ ಪರಿಣಾಮವೇನಿತ್ತು ಎಂಬುದರ ಬಗ್ಗೆ ಗುರುಗಳಿಗೆ ಅನೇಕ ಇಮೇಲ್‌ಗಳು ಬಂದವು. ಇದನ್ನು ಕೇಳಿ ಗುರುಗಳಿಗೆ ತುಂಬ ಸಂತಸವಾಯಿತು.

**ಅಕ್ಟೋಬರ್ 27, ಸೋಮವಾರ:** ಗುರುಗಳ ಹೊರಸಂಚಾರ: ಇದ್ದಕ್ಕಿದ್ದಂತೆ ಗುರುಗಳು, ಗೃಹಪ್ರವೇಶಕ್ಕಾಗಿ ಕಾಯುತ್ತಿರುವ ಅಭ್ಯಾಸಿಯೊಬ್ಬರ ಮನೆಗೆ ಹೋಗಲು ನಿರ್ಧರಿಸಿದರು. ಅವರು ತನ್ನ ಗಾಲ್ಫ್‌ಗಾಡಿಯಲ್ಲಿ ಹೋದರು, ಅಲ್ಲಿ ಪ್ರಸಾದವನ್ನು ಅರ್ಪಿಸಿದರು ಮತ್ತು ಆ ಮನೆಯಲ್ಲಿ ಸುತ್ತಾಡಿದರು, ಅಡಿಗೆ ಮನೆಗೆ ಬಂದು ಹಾಲು ಕಾಯಿಸಲಿದ್ದ ಒಲೆಯನ್ನು ಹಚ್ಚಿದರು. ಅನಂತರ ಗುರುಗಳು ಹಜಾರದಲ್ಲಿ ಕುಳಿತುಕೊಂಡರು. ಆ ಸಮಯದಲ್ಲಿ ಕೆಲವು ಮಕ್ಕಳು ಕರ್ನಾಟಕ ಸಂಗೀತದಲ್ಲಿ ಒಂದೆರಡು ಕೀರ್ತನೆಗಳನ್ನು ಹಾಡಿದರು. ನಂತರ ಗುರುಗಳು ಕುಟೀರಕ್ಕೆ ಮರಳಿದರು.

29ರಂದು ಬುಧವಾರ, ಗುರುಗಳು ಕಿರುಅವಧಿಯ ಸತ್ಸಂಗವನ್ನು ನಡೆಸಿಕೊಟ್ಟು ನಂತರ ವಿವಾಹವೊಂದನ್ನು ನೆರವೇರಿಸಿದರು. ಸುದೀರ್ಘಕಾಲದ ನಂತರ ಕುಟೀರದಲ್ಲಿ ವಿವಾಹವೊಂದು ನಡೆಯುತ್ತಿರುವುದು ಆಹ್ಲಾದಕರ ನೋಟವನ್ನು ತಂದಿತ್ತು. ಅನೇಕ ಛಾಯಾಚಿತ್ರಗಳು ತೆಗೆಯಲ್ಪಟ್ಟವು ಹಾಗೂ ಅಲ್ಲೊಂದು ಹಬ್ಬದ ವಾತಾವರಣ ಎದ್ದುಕಾಣುತ್ತಿತ್ತು.

ಅಕ್ಟೋಬರ್ 31ರಂದು ಗುರುಗಳ ಆರೋಗ್ಯವು ಸ್ವಲ್ಪ ಕುಗ್ಗಿಹೋಗಿತ್ತು. ಕೆಲವು ಪರೀಕ್ಷೆಗಳನ್ನು ಮಾಡಿಸಲಾಯಿತು ಮತ್ತು ಗುರುಗಳೊಂದಿಗಿರಲು ಸೋದರ ಕೃಷ್ಣ ರಾತ್ರಿ ಕುಟೀರಕ್ಕೆ ಬಂದರು.

## ನವೆಂಬರ್ 2014

### ಗುರುಗಳ ಆರೋಗ್ಯ

ನವೆಂಬರ್ ಆದಿಯಲ್ಲಿ, ಗುರುಗಳಿಗೆ ಸೋಂಕು ತಗುಲಿದೆಯೆಂದು ತಿಳಿದುಬಂತು, ಹಾಗಾಗಿ ಆಂಟಿಬಯಾಟಿಕ್‌ಗಳನ್ನು ಕೊಡಲು ಆರಂಭವಾಯಿತು. ಒಂದು ಬೆಳಗ್ಗೆ ಗುರುಗಳು ತನ್ನ ಕಛೇರಿಗೆ ಬಂದಾಗ ಉಲ್ಲಸಿತರಾಗಿ ಕಂಡುಬಂದರು. ಬೆಳಗಿನ ಉಪಾಹಾರ ಸೇವಿಸಿ, ದಿನಪತ್ರಿಕೆಯನ್ನು ಕೇಳಿ ಮುಗಿಸಿದ ಕೂಡಲೇ ಭಾರತದ ಪ್ರಧಾನಮಂತ್ರಿಯ ಕುರಿತಾದ ‘ಪ್ರಧಾನ ಮಂತ್ರಿ’ ಎಂಬ ದೂರದರ್ಶನ ಸರಣಿಯೊಂದನ್ನು ನೋಡಬಯಸಿದರು. ನಂತರ ಅವರು ಸ್ವಲ್ಪ ಹೊತ್ತು ಹೊರಗೆ ಕುಳಿತಿರಲು ನಿಶ್ಚಯಿಸಿದರು.

ಆ ವಾರದ ಕೊನೆಯಲ್ಲಿ ಬೆನ್ನು ನೋವಿಗೆ ಸಂಬಂಧಿಸಿದ ಒಂದು ಸ್ಕ್ಯಾನ್‌ಗಾಗಿ ಗುರುಗಳನ್ನು MIOT ಆಸ್ಪತ್ರೆಗೆ ಒಯ್ಯಲಾಯಿತು. ತನ್ನ ಬಲಗೈಯನ್ನು ಸರಿಯಾಗಿ ಅಲುಗಾಡಿಸಲು ಅವರು ಅಶಕ್ತರಾದುದನ್ನು ಗಮನಿಸಲಾಯಿತು, ಆದರೆ ತಕ್ಕ ಸಮಯದಲ್ಲಿ ನೀಡಿದ ಪರಿಣಾಮಕಾರಿ ಚಿಕಿತ್ಸೆಯಿಂದ, ಗುರುಗಳ ಆರೋಗ್ಯದ ಮೇಲೆ ಆದ ಪರಿಣಾಮ ಅತ್ಯಲ್ಪವಾಗಿತ್ತು. ಒಂದು ವಾರದೊಳಗೆ ಅವರ ಸೋಂಕು ಗುಣಮುಖವಾಯಿತು ಹಾಗೂ ಅವರ ಬಲಗೈ ಕೂಡಾ ಕ್ರಮೇಣ ಮತ್ತೆ ಸರಿಯಾಗಿ ಕೆಲಸ ಮಾಡಲಾರಂಭಿಸಿತು. ಏನಿದ್ದರೂ, ಗುರುಗಳ ಸೋಂಕಿನ ಕಾರಣದಿಂದಾಗಿ, ಕುಟೀರದ ಒಳಗಡೆ ಯಾವುದೇ ಒಂದು ಸಮಯದಲ್ಲೂ ತುಂಬಾ ಜನರು ಇರಬಾರದು ಎಂದು ವೈದ್ಯರುಗಳು ಸ್ಪಷ್ಟಪಡಿಸಿದರು. ತನ್ನ ಬಲಗೈಯನ್ನು ಸಾಮಾನ್ಯ ಸ್ಥಿತಿಗೆ ಮರಳುವಂತೆ ಮಾಡಲು ಗುರುಗಳು ಕೆಲವು ವ್ಯಾಯಾಮಗಳನ್ನು ಮಾಡಿದರು. ಜರ್ಮನಿಯಿಂದ ಬಂದ ಸೋದರಿಯೊಬ್ಬರು ಕೆಲವು ದಿನಗಳ ಕಾಲ ಗುರುಗಳ ಕೈಗೆ ಮಸಾಜ್ ಮಾಡಿದರು ಮತ್ತು ಇದು ಧನಾತ್ಮಕ ಪರಿಣಾಮ ಬೀರಿದಂತೆ ಕಂಡುಬಂದಿತು. ಗುರುಗಳು ತನ್ನ ಸಹಿಯನ್ನು ಹಾಕುವ ಅಭ್ಯಾಸ ಮಾಡಿದರು. ಅವರು ಪೆನ್ನನ್ನು ಮೆತ್ತಗೆ ಹಿಡಿದು ತೀರಾ ನಿಧಾನವಾಗಿ ಬರೆಯಲು





ಯುವ ವಿಚಾರಸಂಕಿರಣದ ಭಾಗಿಗಳೊಂದಿಗೆ

ಪ್ರಯತ್ನಿಸುತ್ತಿದ್ದರು. ಕ್ರಮೇಣ ಅವರ ಸುಧಾರಣೆ ಗೋಚರವಾಗಿತ್ತು. ತನ್ನ ಮಾಮೂಲಿ ಕೆಲಸಕ್ಕೆ ಮರಳಿ ಬರುವ ಗುರುಗಳ ದೃಢನಿರ್ಧಾರವು ತುಂಬ ಸ್ಫೂರ್ತಿದಾಯಕವಾಗಿತ್ತು. ವೈದ್ಯರುಗಳು ಯಾವಾಗಲೂ – ಗುರುಗಳ ವಿಷಯದಲ್ಲಿ, ಅದು ಯಾವಾಗಲೂ, 'ಭೌತದ್ರವ್ಯವನ್ನು ಮೀರುವ ಮನಸ್ಸು'– ಎನ್ನುತ್ತಿರುತ್ತಾರೆ. ನವೆಂಬರ್ ಎರಡನೆ ವಾರಾಂತ್ಯದಲ್ಲಿ ಗುರುಗಳು ಸ್ವಲ್ಪ ಕಷ್ಟದಲ್ಲಿ ಬರೆಯಲು ಶಕ್ತರಾಗಿದ್ದರು ಮತ್ತು ಒಬ್ಬ ಪ್ರಶಿಕ್ಷಕರ ಪ್ರಮಾಣಪತ್ರದಲ್ಲಿ ಸಹಿಯನ್ನೂ ಮಾಡಿದರು.

ಎರಡನೇ ವಾರದ ಕೊನೆಗೆ ಗುರುಗಳ ಆರೋಗ್ಯದಲ್ಲಿ ಸ್ಪಷ್ಟವಾದ ಸುಧಾರಣೆ ಕಂಡುಬಂದಿತ್ತು. ಒಂದು ಸಂದರ್ಭದಲ್ಲಿ ಅವರು ತನ್ನ ಮಲಗುವ ಕೋಣೆಯ ಹೊರಗೆ ಕುಳಿತುಕೊಂಡರು, ಹಾಗೂ ಗೆಲುವಾಗಿ ಕಾಣುತ್ತಿದ್ದರು. ಅವರು ತನ್ನೊಡನೆ ಅಲ್ಲಿ ಬೆಳಗಿನ ಉಪಾಹಾರ ಮಾಡುವಂತೆ ಸೋ. ಕಮಲೇಶ್‌ರವರನ್ನು ಕೇಳಿಕೊಂಡರು. ವಾರ್ತೆಗಳನ್ನು ತುಂಬ ಆಸಕ್ತಿಯಿಂದ ಕೇಳಿದರು. ಒಂದು ಗಂಟೆಗಿಂತಲೂ ಹೆಚ್ಚು ಹೊತ್ತು ಅವರು ಅಲ್ಲಿ ಕುಳಿತಿದ್ದರು, ಸೋ. ಕಮಲೇಶ್‌ರವರು ತನ್ನ ಕಂಪ್ಯೂಟರ್‌ನಲ್ಲಿ ಹಾಕಿದ್ದ ದಿ. ಭೀಮಸೇನ್ ಜೋಷಿಯವರ ಎರಡು ಹಾಡುಗಳನ್ನು ಗುರುಗಳು ಆಲಿಸಿದರು. ಗುರುಗಳು ತನ್ನ ಕಣ್ಣುಗಳನ್ನು ಮುಚ್ಚಿ ಆಲಿಸುತ್ತಿದ್ದರು. ಸಂಗೀತ ಮುಂದುವರಿಯುತ್ತಿದ್ದಾಗ ಗುರುಗಳು ಎಲ್ಲರ ಮೇಲೆ ಕೆಲಸಮಾಡುತ್ತಿದ್ದುದನ್ನು ಗ್ರಹಿಸಬಹುದಾಗಿತ್ತು. ಮುಂಬಯಿ ವಿಶ್ವವಿದ್ಯಾನಿಲಯದ ನಿರ್ದೇಶಕರಾಗಿರುವ ನವ ಅಭ್ಯಾಸಿ ಸೋದರಿಯೊಬ್ಬರು ಗುರುಗಳೊಂದಿಗೆ ಕುಳಿತಿದ್ದರು. ಈ ಸೋದರಿಯು ಆಮೇಲೆ ತನ್ನನ್ನು ಪರಿಚಯಿಸಿಕೊಂಡರು ಮತ್ತು ಅವರಿಬ್ಬರು ಒಂದು ಕಿರು ವಿಚಾರವಿನಿಮಯವನ್ನು ನಡೆಸಿದರು. ಅದಾದ ಮೇಲೆ, ಗುರುಗಳು ವಿಶ್ರಾಂತಿಗೆಂದು ಒಳನಡೆದರು. ಈ ಇಡೀ ಅವಧಿಯು ಸುಮಾರು ಮೂರು ಗಂಟೆ ನಡೆದಿತ್ತು.

**ನವೆಂಬರ್ 21, ಶುಕ್ರವಾರ**

ಗುರುಗಳು ತನ್ನನ್ನು ಭೇಟಿಯಾಗಿ ಆಶೀರ್ವಾದ ಪಡೆಯಲೆಂದು ಬಂದ ನವವಿವಾಹಿತ ಜೋಡಿಯೊಂದನ್ನು ಭೇಟಿಯಾದರು. ನಂತರ ಅವರು ಬಿಸಿಲಿನಲ್ಲಿ ಕುಳಿತು ಕೊಳ್ಳಲು ಕುಟೀರದ ಹೊರಗೆ ಬಂದರು. ಸ್ವಲ್ಪ ಹೊತ್ತಾದ ಬಳಿಕ ಅಭ್ಯಾಸಿಗಳು ಮೆಲ್ಲಗೆ ಒಳಗೆ ಬರಲಾರಂಭಿಸಿದರು ಹಾಗೂ ಎಲ್ಲರೂ ಒಳಬಂದು ಗುರುಗಳೊಡನೆ ಕುಳಿತುಕೊಳ್ಳಲು ಅನುವಾಗುವಂತೆ ಕೂಡಲೇ ಗೇಟುಗಳನ್ನು ತೆರೆಯಲಾಯಿತು.

ಈ ಹೊರಾಂಗಣ ಅಧಿವೇಶನಗಳಲ್ಲಿ, ಗುರುಗಳು ಬಹುಮಟ್ಟಿಗೆ ಮೌನವಾಗಿ ಕುಳಿತಿರುತ್ತಿದ್ದು, ಪ್ರತಿಯೊಬ್ಬರೂ ವಾತಾವರಣದಲ್ಲಿ ತಲ್ಲೀನರಾಗಿರುತ್ತಿದ್ದರು. ಸಾಂದರ್ಭಿಕವಾಗಿ, ಅಭ್ಯಾಸಿಗಳು ಏನಾದರೂ ವಿಷಯವನ್ನೆತ್ತಿದರೆ ಅದು ಸಂಭಾಷಣೆಯಾಗಿ ಮುಂದುವರಿಯುತ್ತಿತ್ತು.

ನವೆಂಬರ್ 23ರ ರವಿವಾರ, ಗುರುಗಳಿಗೆ ಇನ್ನೊಂದು ಸೋಂಕು ತಗುಲಿದೆಯೆಂದು ಆತಂಕವುಂಟಾಗಿತ್ತು. ಕೆಲವು ಪರೀಕ್ಷೆಗಳನ್ನು ಮಾಡಲಾಯಿತು ಹಾಗೂ ಮತ್ತೊಮ್ಮೆ ಅವರಿಗೆ ಸೋಂಕುನಿವಾರಕ ಔಷಧಿಗಳನ್ನು ಕೊಡಲಾರಂಭಿಸಿದ್ದರು. ಗುರುಗಳು ತನ್ನ ಶರೀರವಿಡೀ ವೇದನೆಯನ್ನು ಅನುಭವಿಸುತ್ತಿರುವುದನ್ನು ನೋಡುವುದು ಬಹಳ ಕಠಿಣವಾಗಿತ್ತು. ಹಲವಾರು ದಿನಗಳ ಕಾಲ ಅವರು ಹಾಸಿಗೆಯಲ್ಲೇ ಉಳಿದರು.

**ಯುವ ವಿಚಾರಗೋಷ್ಠಿ**

ನವೆಂಬರ್ 28ರ ಶುಕ್ರವಾರ, ಪೂರ್ವಾಹ್ನ ಸುಮಾರು 10.15 ಕ್ಕೆ ಗುರುಗಳು ಯುವ ವಿಚಾರಗೋಷ್ಠಿಯಲ್ಲಿ ಭಾಗವಹಿಸುವವರೊಂದಿಗೆ ಸ್ವಲ್ಪ ಸಮಯ ಕಳೆಯಲೆಂದು ಕುಟೀರದಿಂದ ಹೊರಗೆ ಬಂದರು. ಈ ವಿಚಾರಗೋಷ್ಠಿಯು ಸೋಮವಾರ ಆರಂಭವಾಗಿದ್ದು ಕೊನೆಯ ಹಂತಕ್ಕೆ ಬಂದಿತ್ತು. ಅದರಲ್ಲಿ ಭಾಗವಹಿಸಲು ದೇಶದ ಎಲ್ಲೆಡೆಯಿಂದ ಸುಮಾರು 250 ಮಂದಿ ಬಂದಿದ್ದರು. ಪ್ರತಿದಿನವೂ ಪ್ರಾತಃಕಾಲ 6.30ಕ್ಕೆ ಸೋದರ ಕಮಲೇಶ್‌ರವರು ಸತ್ಸಂಗವನ್ನು ನಡೆಸಿಕೊಡುತ್ತಿದ್ದರು ಮತ್ತು ಪೂರ್ವಾಹ್ನ 9.00 ಗಂಟೆಗೆ ಭಾಷಣವನ್ನು ನೀಡುತ್ತಿದ್ದರು. ಅಲ್ಲಿ ಸಮೂಹ ಚರ್ಚೆಗಳು ಇರುತ್ತಿದ್ದವು. ಹಾಗೂ ಸಾಯಂಕಾಲಗಳಲ್ಲಿ ಕೆಲವು ಕುತೂಹಲಕಾರಿ ಚಲನಚಿತ್ರಗಳು ಹಾಗೂ ಸಾಕ್ಷ್ಯಚಿತ್ರಗಳ ಪ್ರದರ್ಶನವಿರುತ್ತಿತ್ತು.

ಗುರುಗಳು ಹೊರಗೆ ಕುಳಿತಿದ್ದರು ಹಾಗೂ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಕುಟೀರದೊಳಗೆ ಬಿಡಲಾಗಿತ್ತು. ಹಿಂದಿನ ರವಿವಾರ ಗುರುಗಳಿಗೆ ವಿಚಾರಸಂಕಿರಣದ ಬಗ್ಗೆ ಗೊತ್ತಾದಾಗ ಅವರು, "'ಎಳೆಯ ವಯಸ್ಸಿನಲ್ಲೇ ಅವರನ್ನು ಹಿಡಿದುಕೊಳ್ಳಿ' ಎಂಬ ಮಾತಿನಲ್ಲಿ ನನಗೆ ನಂಬಿಗೆಯಿದೆ" ಎಂದಿದ್ದರು. ಗುರುಗಳು ಹೆಚ್ಚು ಸಂಭಾಷಿಸಲಿಲ್ಲ, ಆದರೆ ಸೋದರರೊಬ್ಬರಿಗೆ ಹತ್ತು ನಿಯಮಗಳ ಬಗ್ಗೆ ಮಾತನಾಡಲು ಅವಕಾಶ ನೀಡಲಾಯಿತು. ಗುರುಗಳು ಅದನ್ನು ಆಲಿಸಿದರು ಹಾಗೂ ಕುಟೀರದ ಒಳಗೆ ಹೋಗುವ ಮೊದಲು ಯುವಜನರೊಂದಿಗೆ 90 ನಿಮಿಷಗಳನ್ನು ಕಳೆದರು.

**ನವೆಂಬರ್ 29, ಶನಿವಾರ: ವಾರ್ತಾ ಲೇಖನ**

ಚಾರ್ಟೆಡ್ ಅಕೌಂಟನ್ಸಿ ವ್ಯಾಸಂಗವನ್ನು ಆಯ್ದುಕೊಳ್ಳುವ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳದ ಬಗ್ಗೆ ಲೇಖನವನ್ನು ಓದಿದ ನಂತರ ಗುರುಗಳು, ಈ ವಾರ್ತೆಯನ್ನು ಕೇಳಿ ತನಗೆ ಸಂತೋಷವಾಗಿದೆಯೆಂದರು. ಅವರು, "ನಾನು ನಮ್ಮ ಹುಡುಗಿಯರಿಗೆ ಇದು ಅತ್ಯಂತ ಸುರಕ್ಷಿತವಾದ ಉದ್ಯೋಗವೆಂದು ತುಂಬಾ ವರ್ಷಗಳಿಂದ ಹೇಳುತ್ತ ಬಂದಿದ್ದೇನೆ. ಅವರಿಗೆ ಕೆಲಸದ ಸಮಯಾವಧಿಯಲ್ಲಿ ಸಡಿಲಿಕೆ ಇರುವುದು ಮತ್ತು ತುಂಬ ಅಪಾಯಕಾರಿಯಾದ ರಾತ್ರಿಪಾಳಿಯಲ್ಲಿ ಕೆಲಸ ಮಾಡುವ ಅಗತ್ಯವಿರುವುದಿಲ್ಲ" ಎಂದರು. ನಂತರ ಸಂಭಾಷಣೆಯು ಸಾಮಾನ್ಯ ವಿಷಯಗಳತ್ತ ತಿರುಗಿತು. ಗುರುಗಳು, ನಮ್ಮ ಕಾಲದಲ್ಲಿ ಆಗ ಒಂದೇ ಗಾತ್ರದ ರೆಫ್ರಿಜರೇಟರ್ ಇತ್ತು, ನಮಗಿದ್ದ ಆಯ್ಕೆ ಅದೊಂದೇ ಆಗಿತ್ತು. ಈಗ ನಿಮಗೆ ದೊಡ್ಡ ದೊಡ್ಡ ಗಾತ್ರದ ರೆಫ್ರಿಜರೇಟರ್‌ಗಳು ಸಿಗುತ್ತವೆ ಮತ್ತು ಅದರಲ್ಲಿ ನೀವು ತೆಗೆದಿಡುವುದೆಲ್ಲ ತಿಂದುಳಿದ ಪಿಜ್ಜಾ, ಪಾಸ್ತಾ ಮತ್ತು ಅಂಥವನ್ನು ಮಾತ್ರ. ನಿಮ್ಮಲ್ಲಿ ಒಂದು ಕಾರು ಇದ್ದಾಗ, ಈಗ ಇನ್ನೊಂದು ಕಾರು ಬೇಕಾಗುತ್ತದೆ. ನಾವೆಲ್ಲ ನಮ್ಮ ಅಗತ್ಯಗಳನ್ನು ಮೂಲಭೂತ ಕನಿಷ್ಠ ಮಟ್ಟಕ್ಕೆ ಇಳಿಸಿದರೆ ಆಗ ನಾವು ಸಂತೋಷ ಹಾಗೂ ಸಂತೃಪ್ತಿಯಿಂದ ಇರಬಹುದು." ಎಂದರು.

ಶ್ರೀ ರಾಮಚಂದ್ರ ಮಿಷನ್® ಎಖೋಸ್ ಇಂಡಿಯಾ ವಾರ್ತಾಪತ್ರ

## ಡಿಸೆಂಬರ್ 2014

### ಅಂತಿಮ ವಾರಗಳು

**ಪ್ರಶಿಕ್ಷಕರಿಗೆ ಸಾಮೂಹಿಕ ಬೈಠಕ್‌ಗಳು**

ಡಿಸೆಂಬರ್ 3 ಮತ್ತು 4ರಂದು ಗುರುಗಳು 39 ಹೊಸ ಪ್ರಶಿಕ್ಷಕರ ತಂಡವೊಂದಕ್ಕೆ ಕೊನೆಯ ಸಾಮೂಹಿಕ ಬೈಠಕ್ ಕೊಟ್ಟರು. ಅವರ ಪ್ರಮಾಣ ಪತ್ರಗಳಿಗೂ ಗುರುಗಳು ಸಹಿಹಾಕುವುದನ್ನು ನಿಭಾಯಿಸಿದರು. ನಂತರದ ದಿನಗಳಲ್ಲಿ ಗುರುಗಳು ಸಾಮಾನ್ಯವಾಗಿ ಬೆಳಗಿನ ಉಪಾಹಾರವಾದ ಕೂಡಲೆ ವಿಶ್ರಾಂತಿಗಾಗಿ ತೆರಳುತ್ತಿದ್ದರು ಹಾಗೂ ಮತ್ತೆ ಎದ್ದೇಳುತ್ತಿದ್ದುದು ಅಪರಾಹ್ನವೇ ಆಗಿತ್ತು.



**ನಿಮ್ಮ ಕೆಲಸವನ್ನು ಪರಿಪೂರ್ಣವಾಗಿ ಮಾಡಿ:**

ಒಂದು ದಿನ ಸೋದರಿಯೊಬ್ಬರು ಕುಟೀರಕ್ಕೆ ಬಂದು, "ಮಾಸ್ಟರ್, ನೀವು ಎಷ್ಟೊಂದು ನೋವನ್ನು ಅನುಭವಿಸುತ್ತಿದ್ದೀರಿ, ದಯವಿಟ್ಟು ನನಗೆ ನಿಮ್ಮ ನೋವಲ್ಲಿ ಪಾಲ್ಗೊಳ್ಳಲು ಅನುಮತಿಸಿರಿ." ಎಂದರು. ಗುರುಗಳು, ಒಂದು ಮೃದುವಾದ ವಾತ್ಸಲ್ಯಮಯಿ ನಗುವಿನೊಂದಿಗೆ, "ಅದು ನಿಷಿದ್ಧ. ಅದಕ್ಕಾಗಿ ಕೇಳಲಾಗದು. ನನಗಾಗಿ ಏನನ್ನಾದರೂ ಮಾಡಬೇಕೆಂದು ನೀವು ನಿಜವಾಗಿಯೂ ಬಯಸಿದರೆ, ನಿಮ್ಮ ಕೆಲಸವನ್ನು ಪರಿಪೂರ್ಣವಾಗಿ ಮಾಡಿ. ನೀವು ಮಾಡಬಲ್ಲ ಅತ್ಯುತ್ತಮವಾದ ಸಂಗತಿ ಅದೇ." ಎಂದರು.

**880 ವೋಲ್ಟ್ ಪ್ರಾಣಾಹುತಿ:**

USA ಯಿಂದ ಬಂದ 83 ವಯಸ್ಸಿನ ಅಭ್ಯಾಸಿಯೊಬ್ಬರು ಗುರುಗಳನ್ನು ನೋಡಲೆಂದು ಒಂದು ಗಂಟೆಗಿಂತಲೂ ಹೆಚ್ಚು ಕಾಲ ಕಾದಿದ್ದರು. ಕೊನೆಗೂ ಅವರು ಭೇಟಿಯಾದಾಗ, ಆ ಅಭ್ಯಾಸಿ, "ಮಾಸ್ಟರ್, ನನಗೆ ನೆನಪಿದೆ, ಒಂದು ಸಂದರ್ಭದಲ್ಲಿ ನೀವು ಬೈಠಕ್ ಆರಂಭಿಸಿದಿರಿ ಹಾಗೂ ನನಗೆ 880 ವೋಲ್ಟ್ ಪ್ರಾಣಾಹುತಿಯನ್ನು ನನ್ನೊಳಗೆ ರವಾನಿಸಿದಂತೆನಿಸಿತು– ನಾನು ನೆಲಕ್ಕೆ ಉರುಳಿದ್ದೆ!" ಎಂದರು. ಗುರುಗಳು ನಕ್ಕುಬಿಟ್ಟರು. ಆ ಸೋದರ ಮತ್ತೆ, "ನೀವು ನಿಮ್ಮಲ್ಲಿಗೆ ಬರುವ ಪ್ರತಿಯೊಬ್ಬರಿಗೆ ಹೇಗೆ ಪ್ರಾಣಾಹುತಿಯನ್ನು ಕೊಡುತ್ತ ಹೋಗುತ್ತೀರಿ ಎಂಬುದನ್ನು ನೋಡಿ ನಾನು ಕರಗಿ ಹೋಗಿದ್ದೇನೆ" ಎಂದರು. ಗುರುಗಳು ಮತ್ತೆ ನಕ್ಕುಬಿಟ್ಟರು, ಮತ್ತು ಅಲ್ಲಿ ಸಂಪೂರ್ಣ ಸ್ತಬ್ಧತೆಯ ಒಂದು ಕ್ಷಣ ಉಂಟಾಯಿತು. ಏನು ಸಂಭವಿಸಿತ್ತು ಎಂಬುದನ್ನು ಗುರುಗಳು ಮಾತ್ರ ಬಲ್ಲರು, ಆದರೆ ಆ ಕೋಣೆಯಲ್ಲಿದ್ದ ಅನೇಕರ ಕಂಗಳಲ್ಲಿ ನೀರಾಡಿತ್ತು.

**ಮೌನ ಬೈಠಕ್**

ಒಂದು ಸಾಯಂಕಾಲ, ಗುರುಗಳು ಅಸಹನೀಯ ನೋವಿನಲ್ಲಿದ್ದರು, ಅವರ ಕಣ್ಣುಗಳು ಮುಚ್ಚಿದ್ದವು. ಅವರು ನಿದ್ರಿಸ ಹೋಗುತ್ತಿದ್ದಂತೆ ಕಂಡಿತು, ಒಮ್ಮೆಲೇ ಅವರು, "ದ್ಯಾಟ್ಸ್ ಆಲ್" ಎಂದರು. "ನಾನು ಒಂದು ಬೈಠಕ್ ಕೊಡುತ್ತಿದ್ದೆ" ಎಂದು ವಿವರಿಸಿದರು. ತನ್ನ ಅನಾರೋಗ್ಯದ ಹೊರತಾಗಿಯೂ ಅವರ ಕೆಲಸ ಮುಂದುವರಿದಿತ್ತು.

**ಡಿಸೆಂಬರ್ 10, ಬುಧವಾರ**

ಸೋದರ ಕೃಷ್ಣ ಗುರುಗಳ ಬಗ್ಗೆ ತುಂಬ ಆತಂಕಿತರಾಗಿದ್ದು ಕುಟೀರದಲ್ಲೇ ಉಳಿದುಕೊಳ್ಳಲು ನಿರ್ಧರಿಸಿದರು. ಹಲವಾರು ದಿನಗಳ ನಂತರ ಗುರುಗಳು ಸ್ವಲ್ಪ ಸುಧಾರಿಸಿದಂತೆ ಕಂಡುಬಂದರು. ತನ್ನ ಗಾಲ್ಫ್ ಗಾಡಿಯಲ್ಲಿ ಹೊರಗೆ ಹೋಗಲೂ ಯೋಜಿಸಿದರು. ಏನಿದ್ದರೂ ಮರುದಿನ ಗುರುಗಳು ಮತ್ತೆ ಅಸೌಖ್ಯಕ್ಕೀಡಾದರು.

**ಮನರಂಜನೆ**

ನಿಯತವಾದ ಸಾಯಂಕಾಲದ ಚಲನಚಿತ್ರದ ಹೊರತಾಗಿ, ಗುರುಗಳು ದೂರದರ್ಶನದ ವಿವಿಧ ಸರಣಿಗಳನ್ನು ನೋಡುವುದನ್ನು ಮುಂದುವರಿಸಿದರು. "ಬುದ್ಧ" ಸರಣಿಯ ಆತನ ಜೀವನದ ಅಂತಿಮ ದಿನಗಳನ್ನು ತೋರಿಸುವ ಕೊನೆಯ ಕಂತಿನಲ್ಲಿ, ಆತ ಹೇಗೆ ವಿಷಯುಕ್ತವೆಂದು ಅರಿತಿದ್ದರೂ ಆಹಾರವನ್ನು ಸೇವಿಸಿದ ಎಂಬುದನ್ನು ಹೇಳಲಾಗಿತ್ತು. ಯಾರೋ ಗುರುಗಳಿಗೆ, "ಹಳೆಯ ದಿನಗಳಲ್ಲಿ ನಿಮಗೂ ಇದೇ ಸಂಭವಿಸಿತ್ತು. ನಿಮಗೆ ಗೊತ್ತಿತ್ತು, ಆದರೂ ಅದನ್ನು ತೆಗೆದುಕೊಂಡಿರಿ." ಎಂದರು. ಅದೇಕೆ ಅದನ್ನು ಮಾಡಲಾಗುತ್ತದೆ ಎಂದಾಗ ಗುರುಗಳು, "ಅದು ಹಾಗೇ ಇರುತ್ತದೆ." ಎಂದರು.

**ಗುರುಗಳಿಂದ ಒಂದು ಸಂದೇಶ:**

ಡಿಸೆಂಬರ್ 15ರಂದು ರಶ್ಯಾದವರ ವಿಚಾರ ಸಂಕಿರಣವು ಆರಂಭವಾಗಿತ್ತು. ಗುರುಗಳು ತನ್ನ ಹಾಸುಗೆಯಿಂದಲೇ ಒಂದು ಸಂದೇಶವನ್ನು ಮುದ್ರಣ ಮಾಡಿಸಿದರು, ಅದನ್ನು ಧ್ಯಾನ ಮಂದಿರದಲ್ಲಿ ಬಿತ್ತರಿಸಲಾಯಿತು: "*ಪ್ರಿಯ ಸೋದರ ಸೋದರಿಯರೆ, ನಿಮ್ಮೆಲ್ಲರೊಂದಿಗೆ ಇರಲಾಗುವುದಿಲ್ಲವೆಂದು ನಾನು ವಿಷಾದಿಸುತ್ತೇನೆ, ಆದರೆ ನಾನು ಆತ್ಮಚೈತನ್ಯದಲ್ಲಿ ನಿಮ್ಮೊಂದಿಗಿದ್ದೇನೆ. ನಿಮಗೆ ಅದರ ಅನುಭವವಾಗುತ್ತಿದೆಯೆಂಬ ಭರವಸೆ ನನಗಿದೆ. ನಾನು ಸದಾಕಾಲ ನಿಮ್ಮೆಲ್ಲರೊಂದಿಗಿರುವೆ ಎಂದು ನಾನು ಹೇಳುವಾಗ ದಯವಿಟ್ಟು ನನ್ನನ್ನು ನಂಬಿ. ಇಲ್ಲಿಯೋ, ನಿಮ್ಮ ರಶ್ಯಾದಲ್ಲೋ ಅಥವಾ ಇನ್ನಿತರ ದೇಶಗಳಲ್ಲೋ ಎಂಬುದು ಅದು ಮಹತ್ವದ್ದಲ್ಲ. ದೂರವು ಯಾವುದೇ ವ್ಯತ್ಯಾಸವನ್ನುಂಟುಮಾಡುವುದಿಲ್ಲ– ದೂರ ಎಂಬುದಿಲ್ಲ. ನಾನು ನಿಮ್ಮೆಲ್ಲರಿಗಾಗಿ ಪ್ರಾರ್ಥಿಸುತ್ತೇನೆ ಹಾಗೂ ನಿಮಗೆ ಅತ್ಯುತ್ತಮವಾದುದನ್ನು ಹಾರೈಸುತ್ತೇನೆ. ನಿಮ್ಮೆಲ್ಲರಿಗೆ ಆಶೀರ್ವಾದಗಳು.*"

**ಕೊನೆಯ ಬಾರಿ ಹೊರಗೆ:**

ಗುರುಗಳಿಗೆ ಅವರ ಹಾಸುಗೆಯಿಂದ ಗಾಲಿಕುರ್ಚಿಗೆ ಹೋಗಲು ಮತ್ತು ಕುಟೀರದಿಂದ ಹೊರಗೆ ಬರಲು ಸಹಾಯವಾಗಲೆಂದು USA ಯಿಂದ ತಂದಿದ್ದ ವಿಶೇಷ ಉಪಕರಣವನ್ನು ಬಳಸಲಾಯಿತು. ಉಪಾಹಾರ ಹಾಗೂ ವಾರ್ತಾಪತ್ರಿಕೆ ಪಠನದ ನಂತರ ಗುರುಗಳು ಒಂದು ಪುಸ್ತಕವನ್ನು ಓದಲು ಹೇಳಿದರು, ಅದನ್ನು ಆಲಿಸುತ್ತ ಕಣ್ಮುಚ್ಚಿ ಕುಳಿತುಕೊಂಡರು.

ಗುರುಗಳು ಯಾವತ್ತೂ ಒಬ್ಬ ಉತ್ಸುಕ ಓದುಗರಾಗಿದ್ದರು ಹಾಗೂ ಈ ಆಸಕ್ತಿಯನ್ನು ಅವರು ಕಟ್ಟ ಕಡೆಯ ವರೆಗೂ ಉಳಿಸಿಕೊಂಡಿದ್ದರು. ದಿನನಿತ್ಯದ ವಾರ್ತಾ ಪತ್ರಿಕೆಯ ಪಠನದ ಜೊತೆಗೆ ಅವರು ತನಗಾಗಿ ಒಂದು ಪುಸ್ತಕವನ್ನು, ವಿಶೇಷತಃ ಅವರಿಗೆ ನಿದ್ರೆ ಬಾರದಿದ್ದಾಗ ಓದಿಸಿ ಕೇಳುತ್ತಿದ್ದರು. ಅವರು ತೀವ್ರಾಸಕ್ತಿಯಿಂದ ಆಲಿಸುತ್ತ ಕೆಲವೊಮ್ಮೆ ಓದುತ್ತಿರುವವರ ಉಚ್ಚಾರವನ್ನೂ ತಿದ್ದುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಅವರು ನಿದ್ರೆಗೆ ಜಾರುತ್ತಿದ್ದರು.

**ಕೊನೆಯ ಎರಡು ದಿನಗಳು**

ಡಿಸೆಂಬರ್ 18ರಿಂದ ಗುರುಗಳು ತೀರಾ ಅಸ್ವಸ್ಥರಾಗಿದ್ದರು ಹೆಚ್ಚಿನ ಸಮಯವೆಲ್ಲ ಹಾಸುಗೆಯಲ್ಲಿದ್ದರು. 20ನೇ ತಾರೀಕಿನ ಅಪರಾಹ್ನ ಗುರುಗಳ ದೈಹಿಕಸ್ಥಿತಿಯು ಅಸ್ಥಿರವಾಯಿತು, ಅವರಿಗೆ ಉಸಿರಾಟದ ತೊಂದರೆಗಳು ಕಾಣಿಸಿಕೊಂಡವು. ಅವರನ್ನು ಸ್ಥಿರಗೊಳಿಸಲು ವೈದ್ಯರುಗಳ ಶತಪ್ರಯತ್ನಗಳ ಹೊರತಾಗಿಯೂ ರಾತ್ರಿ ಸುಮಾರು 9.45ರ ಹೊತ್ತಿಗೆ, ಹಲವಾರು ಅದ್ಭುತಗಳ ಒಂದು ಶಕಾಂತ್ಯವನ್ನು ತರುತ್ತ, ಗುರುಗಳು ತಮ್ಮ ಶರೀರದಿಂದ ನಿರ್ಗಮಿಸಿದರು.

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ



## ಅಖಿಲ ಭಾರತ ಯುವ ಸಮಾವೇಶ

**ನವೆಂಬರ್ 25 ರಿಂದ 29, 2014.**

ದೇಶದ ಎಲ್ಲ ಭಾಗಗಳಿಂದ ಸುಮಾರು 260 ಯುವ ಅಭ್ಯಾಸಿಗಳು "ಪಾವಿತ್ರ್ಯತೆಯು ನಿಯತಿಯನ್ನು ನಿರ್ಮಿಸುತ್ತದೆ" ಎಂಬ ವಿಷಯದ ಮೇಲಿನ ಈ ಸಮಾವೇಶದಲ್ಲಿ ಪಾಲ್ಗೊಂಡರು. ಸಮಾವೇಶಕ್ಕಾಗಿ ಅಭ್ಯಾಸಿಗಳಿಗೆ ಎರಡು ತಿಂಗಳ ವ್ಯವಸ್ಥಿತ ತಯಾರಿಯನ್ನು ನೀಡಲಾಗಿತ್ತು.ಸಮಾವೇಶವು ಪ್ರತಿದಿನ ಬೆಳಗ್ಗೆ 6:30ಕ್ಕೆ ಸೋ. ಕಮಲೇಶ್‌ರವರು ನಡೆಸಿಕೊಡುತ್ತಿದ್ದ ಸತ್ಸಂಗದೊಂದಿಗೆ ಆರಂಭವಾಗುತ್ತಿತ್ತು ಮತ್ತು 9:00 ಗಂಟೆಗೆ ಅವರ ಭಾಷಣವಿರುತ್ತಿತ್ತು. ದಿನದ ಕಾರ್ಯಕ್ರಮಗಳಲ್ಲಿ – ಭಾಷಣಗಳು, ಆತ್ಮಾವಲೋಕನ, ಗುಂಪು ಚರ್ಚೆಗಳು, ನಿಶ್ಯಬ್ಧದ ಅವಧಿಗಳು ಮತ್ತು ಸ್ವಯಂ ಸೇವಾ ಕಾರ್ಯಗಳ ಉತ್ತಮ ಮಿಶ್ರಣವಿರುತ್ತಿತ್ತು.

ಸೋ. ಕಮಲೇಶ್‌ರವರು ನೀಡಿದ ಉಪನ್ಯಾಸಗಳ ಮುಖ್ಯಾಂಶಗಳು ಈ ಕೆಳಕಂಡತೆ ಇವೆ:

- ಅವರು "ಸಹಜಮಾರ್ಗಾನುಸಾರ ರಾಜಯೋಗದ ಪ್ರಭಾವ" ಮತ್ತು "ಅನಂತದೆಡೆಗೆ" ಇವೆರಡೂ ಕೂಡ ಯುವ ಅಭ್ಯಾಸಿಗಳು 'ಅವಶ್ಯವಾಗಿ ಓದಬೇಕಾದ' ಪುಸ್ತಕಗಳು ಎಂದು ತಿಳಿಸಿದರು.
- ಸಂವೇದನಾಶೀಲತೆಯನ್ನು ವಿವರಿಸುತ್ತಾ ಅವರು ಹೇಳಿದರು, "ನಮ್ಮ ಪ್ರಜ್ಞೆಯು ಭೋರ್ಗರೆವ ಸಾಗರದಂತಿದ್ದರೆ ಅದರಲ್ಲಿ ದೊಡ್ಡ ಬಂಡೆಯನ್ನು ಹಾಕಿದರೂ ಅದು ನಮ್ಮ ಅರಿವಿಗೆ ಬರುವುದಿಲ್ಲ. ಬದಲಾಗಿ, ನಮ್ಮ ಪ್ರಜ್ಞೆಯು ಪ್ರಶಾಂತವಾದ ಸರೋವರದಂತೆ ಇರಬೇಕು, ಆಗ ಒಂದು ಸಣ್ಣ ಎಲೆ ಬಿದ್ದರೂ ತರಂಗಗಳು ಉಂಟಾಗುತ್ತವೆ."
- ನಿದ್ರೆಯ ರೂಢಿಯನ್ನು ಬದಲಿಸಿಕೊಳ್ಳಬೇಕು ಎಂಬುದನ್ನು ಒತ್ತಿ ಹೇಳಿದ ಅವರು ಪ್ರತಿದಿನವೂ ಬೇಗ ಮಲಗಿ ಬೇಗ ಏಳಲು ತಿಳಿಸಿದರು. ಈ ಸಣ್ಣ ಬದಲಾವಣೆಯು ನಮ್ಮ ಸಂಪೂರ್ಣ ಪರಿವರ್ತನೆಗೆ ಅವಶ್ಯವಾದುದು ಎಂದು ಅವರು ಮತ್ತೆ ಮತ್ತೆ ಒತ್ತಿ ಹೇಳಿದರು.
- ಅವರು, ಸಣ್ಣ ಗುರಿಗಳನ್ನು ಹೊಂದಿ ಅವುಗಳ ಸಹಾಯದಿಂದ ಅಂತಿಮ ಗುರಿಯ ಮೇಲೆ ಲಕ್ಷ್ಯವನ್ನು ಇರಿಸಿಕೊಳ್ಳುವ ಸಲಹೆಯನ್ನಿತ್ತರು.

ಅವರೊಂದಿಗೆ ಒಂದು ಉತ್ತಮವಾದ ಪ್ರಶ್ನೋತ್ತರದ ಅವಧಿ ಕೂಡ ಇದ್ದಿತು. ಪ್ರತಿದಿನವೂ ವಿಸ್ಪರ್ಸ್ ಸಂದೇಶಗಳನ್ನು ಓದುವ ಅವಧಿಯಿದ್ದು ಅದರಲ್ಲಿ ಪರಿಶುದ್ಧತೆಯ ವಿಷಯಕ್ಕೆ ಸಂಬಂಧಿಸಿದ ಆಯ್ದ ಸಂದೇಶಗಳನ್ನು ನೀಡಲಾಗುತ್ತಿತ್ತು. ಮಧ್ಯಾಹ್ನದ ಅವದಿ ಗಳಲ್ಲಿ ಸಂವಾದದ ವಿಷಯದ ಕುರಿತಾದ ಸಭೆಗಳನ್ನು ಏರ್ಪಡಿಸಲಾಗಿತ್ತು – ಹೃದಯದ ಬಳಕೆ (ಎಲಿಜಬೆತ್ ಡೆನ್ಲೆ), ಸಹಜಮಾರ್ಗ ಜೀವನದ ರೀತಿ (ಪುನೀತ್ ಲಾಲ್ ಭಾಯಿ) ಹತ್ತು ನಿಯಮಗಳು (ರಿಷಿ ರಂಜನ್). ಸೋ. ಎಸ್. ಪ್ರಕಾಶ್‌ರವರು ನಡೆಸಿದ ತಂಡ ಕಟ್ಟುವ ಚಟುವಟಿಕೆಯು ಮೋಜಿನ ಕ್ಷಣಗಳಿಂದ ಕೂಡಿತ್ತು ಮತ್ತು ಎಲ್ಲರೂ ಒಟ್ಟಾಗಿ ಕೆಲಸ ಮಾಡುವ ಕಲಿಕೆಯನ್ನು ಹೊಂದಿತ್ತು. ತಮ್ಮ ಅನಾರೋಗ್ಯದ ನಡುವೆಯೂ, ಗುರುಗಳು ಯುವ ಅಭ್ಯಾಸಿಗಳೊಂದಿಗೆ ಸ್ವಲ್ಪ ಸಮಯ ಕಳೆದರಲ್ಲದೆ ಅಭ್ಯಾಸಿಯೊಬ್ಬರು ನುಡಿಸಿದ ಸ್ಯಾಕ್ಸೋಫೋನನ್ನು ಕೂಡ ಕೇಳಿದರು. ಸಮಾವೇಶವು ಮುಕ್ತಾಯದ ಹಂತಕ್ಕೆ ಬಂದಾಗ, ಇದು ತಮ್ಮ ನೈಜ ನಿವಾಸವೆಂದು ತಿಳಿದು ಬಂದಿದ್ದ ಎಲ್ಲರೂ ವಿಯೋಗದ ದುಃಖ ಹಾಗು ಸಂತೋಷದ ಮಿಶ್ರಭಾವನೆಯೊಂದಿಗೆ ಹಿಂದಿರುಗಿದರು.



## ಪ್ರಶಿಕ್ಷಕರ ಆರನೆ ತಂಡದ ತಯಾರಿ

**28 ನವೆಂಬರ್ ರಿಂದ 7 ಡಿಸೆಂಬರ್**

ದೇಶದ ನಾನಾ ಕಡೆಗಳಿಂದ 39 ಪ್ರಶಿಕ್ಷಕ ಅಭ್ಯರ್ಥಿಗಳು, ಪ್ರಶಿಕ್ಷಕರನ್ನು ತಯಾರು ಮಾಡುವ ಅತಿದೊಡ್ಡ ಕಾರ್ಯಾಗಾರದಲ್ಲಿ ಪಾಲ್ಗೊಂಡರು. ತಮ್ಮ ಬಿಡುವಿಲ್ಲದ ವೇಳಾಪಟ್ಟಿಯ ನಡುವೆಯೂ ಸೋ. ಕಮಲೇಶ್‌ರವರು ಅಭ್ಯಾಸಿಗಳೊಂದಿಗೆ ಸಮಯ ಕಳೆದರಲ್ಲದೆ, ಪ್ರೇಮ ಮತ್ತು ನಮ್ರತಾ ಭಾವದಿ ಂದ ಸೇವಾಕಾರ್ಯ ಮಾಡುವುದರ ಬಗೆಗೆ ಎರಡು ಭಾಷಣಗಳನ್ನೂ ಕೂಡ ಮಾಡಿದರು. ಇದಲ್ಲದೆ ಸೋ. ಕಮಲೇಶ್ ರವರು ಯುವ ಅಭ್ಯಾಸಿಗಳು ಹಾಗು ಈಶಾನ್ಯ ಪ್ರದೇಶದಿಂದ ಬಂದಿದ್ದ ಪ್ರತಿನಿಧಿಗಳನ್ನು ಉದ್ದೇಶಿಸಿ ಭಾಷಣ ಮಾಡಿದ ಕಾರ್ಯಕ್ರಮಕ್ಕೂ ಸಹ ಈ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿತ್ತು.

ಈ ಕಾರ್ಯಕ್ರಮದ ವಿಷಯವು, ಯಾವ ಕಾರಣಕ್ಕಾಗಿ ಪ್ರಶಿಕ್ಷಕನು ಒಬ್ಬ "ತೀವ್ರವಾದ ಅಭ್ಯಾಸಿ" ಎಂಬುದಾಗಿತ್ತು ಮತ್ತು ಪ್ರಶಿಕ್ಷಕರು ತಮ್ಮ ಸಾಧನೆಯ ಕಡೆಗೆ ಹಾಗು ಚಾರಿತ್ರ್ಯ ನಿರ್ಮಾಣದೆಡೆಗೆ ಗಮನ ಹರಿಸಿ, ಗುರುಗಳ ಸಾಧನವಾಗಿ ಅವರ ಕಾರ್ಯದಲ್ಲಿ ಭಾಗವಹಿಸುವುದು ಏಕೆ ಅವಶ್ಯಕ ಎಂಬುದಾಗಿತ್ತು. ಆಧ್ಯಾತ್ಮಿಕ ಆಕಾಂಕ್ಷಿಗಳಲ್ಲಿ ಇರಬೇಕಾದ ಅಗತ್ಯ ಅಂಶಗಳು ಮತ್ತು ಅವರವರ ಆಶ್ರಮಗಳಿಗೆ ತೆಗೆದುಕೊಂಡು ಹೋಗಬಹುದಾದ ಪ್ರಮುಖ ಕಲಿಕೆಗಳ ಮೇಲೆ ಅವಲೋಕಿಸಿಕೊಳ್ಳುವ ಅವಧಿಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಕಾರ್ಯನಿರ್ವಾಹಕರ ಭೇಟಿ

### ಜಂಟಿ ಕಾರ್ಯದರ್ಶಿಯವರ ಪ್ರವಾಸ, ವಲಯ 2–ಸಿ (ತಮಿಳುನಾಡು ಪಶ್ಚಿಮ)

ಮುಕ್ತ ಸಭೆಗಳನ್ನು ನಡೆಸುವುದು, ಹೋಂ ಗ್ಯಾದರಿಂಗ್‌ಗಳನ್ನು ನಡೆಸುವುದು, ಪ್ರಶಿಕ್ಷಕರುಗಳನ್ನು ಭೇಟಿ ಮಾಡುವುದು ಮತ್ತು ಅಭ್ಯಾಸಿಗಳೊಂದಿಗೆ ಗರಿಷ್ಠ ಕಾಲವನ್ನು ಕಳೆಯುವುದು ಈ ಪ್ರವಾಸದ ಮುಖ್ಯ ಉದ್ದೇಶವಾಗಿತ್ತು. ಜಿಲ್ಲಾ ಉಸ್ತುವಾರಿ ಸೋ. ವಿಶ್ವನಾಥರಾವ್‌ರವರು ಈ ಪ್ರವಾಸವನ್ನು ಆಯೋಜಿಸಿದ್ದರು.

ತಾ. 8 ರಂದು, ಕಗ್ಗುಚ್ಚಿಯ (ಕೋಟಗಿರಿಯಿಂದ 10 ಕಿ.ಮೀ ದೂರವಿರುವ ಒಂದು ಹಳ್ಳಿ) ಗಿರಿ ಈಶ್ವರ ಮೆಟ್ರಿಕ್ಯುಲೇಶನ್ ಶಾಲೆಯಲ್ಲಿ ನಡೆದ 'ಓಪನ್ ಹೌಸ್' ಕಾರ್ಯಕ್ರಮದಲ್ಲಿ ಸೋ. ಎ.ಪಿ ದುರೈ ಹಾಗು ಎಮ್.ಎಮ್. ಧನುಮೂರ್ತಿಯವರು ಮಾತನಾಡಿದರು ಮತ್ತು ಅಲ್ಲಿ 12 ಮಂದಿ ಶಾಲೆಯ ಸಿಬ್ಬಂದಿಗಳು ಧ್ಯಾನ ಮಾಡಲು ಮುಂದೆ ಬಂದರು. ಮಧ್ಯಾಹ್ನ ವೆಲ್ಲಿಂಗ್ಟನ್‌ನ DSSCಯಲ್ಲಿ ನಡೆದ 'ಹೋಂ ಗ್ಯಾದರಿಂಗ್'ನ ನಂತರ ಅರುವನಕಾಡು ಕೇಂದ್ರದಲ್ಲಿ ನಡೆದ 'ಓಪನ್ ಹೌಸ್'ನಲ್ಲಿ 12 ಮಂದಿ ಹೊಸ ಆಕಾಂಕ್ಷಿಗಳೂ ಸೇರಿದಂತೆ 26 ಜನರು ಉಪಸ್ಥಿತರಿದ್ದರು.

ತಾ. 9 ರಂದು, ಊಟಿ ಕೇಂದ್ರದಲ್ಲಿ ನಡೆದ ಪೂರ್ಣದಿನದ ಸತ್ಸಂಗದಲ್ಲಿ 26 ಜನರು ಪಾಲ್ಗೊಂಡರು. ಸೋ. ದುರೈಯವರು ಸಾಧನೆಯಲ್ಲಿ ಸ್ಪಷ್ಟತೆ ಹೊಂದಿರುವುದು ಮತ್ತು ಆಧ್ಯಾತ್ಮಿಕತೆಯಲ್ಲಿ ಸ್ಪಷ್ಟವಾದ ಗುರಿ ಹೊಂದಿರುವುದರ ಅಗತ್ಯದ ಬಗೆಗೆ ಮಾತನಾಡಿದರು. ನಂತರ ತಂಡವು ಥಂಗಡುವಿನ ಸುಂದರವಾದ ಕೊಪ್ಪಲಿಗೆ ತೆರಳಿತು ಮತ್ತು ಅಲ್ಲಿ ಸಹೋದರರೊಬ್ಬರ ಮನೆಯಲ್ಲಿ 9 ಮಂದಿ ಸೇರಿದ್ದರು. ದೈನಂದಿನದ ಅಭ್ಯಾಸ ಹಾಗು ಸತ್ಸಂಗಗಳನ್ನು ನಡೆಸುವುದರ ಬಗೆಗೆ ವಿವರಿಸಲಾಯಿತು.

ತಾ. 10 ರಂದು, ಊಟಿ ಕೇಂದ್ರದಲ್ಲಿ ಬೆಳಗ್ಗೆ ನಡೆದ ಮುಕ್ತಸಭೆಯಲ್ಲಿ 15 ಮಂದಿ ಆಸಕ್ತರು ಮತ್ತು ಸಾಧನೆಯನ್ನು ನಿಲ್ಲಿಸಿಬಿಟ್ಟಿದ್ದ ಕೆಲ ಅಭ್ಯಾಸಿಗಳು ಭಾಗವಹಿಸಿದರು. ಸೋ. ದುರೈ ಸಾಧನೆಯ ಬಗೆಗೆ ವಿವರಿಸಿ ಅಭ್ಯಾಸವನ್ನು ಮುಂದುವರೆಸುವಂತೆ ಅವರನ್ನು ಪ್ರೋತ್ಸಾಹಿಸಿದರು. ಮಧ್ಯಾಹ್ನ ಕೋಟಗಿರಿಯ ವಿಶ್ವಶಾಂತಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ 35 ಶಿಕ್ಷಕ ಸಿಬ್ಬಂದಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು. ಸ್ವಾಮಿ ವಿವೇಕಾನಂದರ ಕೃತಿಗಳನ್ನು ಉಲ್ಲೇಖಿಸಿ ಮಾತನಾಡಿದ ಅವರು, ಆತ್ಮವು ಹೇಗೆ ಈ ಭೌತಿಕ ಶರೀರವೆಂಬ ಪಂಜರದೊಳಗೆ ಸಿಲುಕಿಕೊಂಡು, ಸಂಸ್ಕಾರಗಳ ಪರಿಣಾಮದಿಂದಾಗಿ ಕೆಳಗೆಳೆಯಲ್ಪಡುತ್ತದೆ ಮತ್ತು ಸಮರ್ಥ ಗುರುವೊಬ್ಬರು ಸಾಧಕನ ಮುಂದಿನ ಹಾದಿಯನ್ನು ತೆರವುಗೊಳಿಸಿ ಆತನು ಮುಂದುವರೆಯುವಂತೆ ಹೇಗೆ ಸಹಕರಿಸುತ್ತಾರೆ ಎಂಬುದನ್ನು ವಿವರಿಸಿದರು.

ಸಂಜೆ ಸುಮಾರು 5:30ಕ್ಕೆ ಕೊಯಮತ್ತೂರನ್ನು ಸೇರಿದ ನಂತರ ಸೋ. ದುರೈಯವರು 15 ಸ್ವಯಂಸೇವಾ ಸಂಘಟಕರಿದ್ದ ಸಭೆಯಲ್ಲಿ ಭಾಗವಹಿಸಿದರು. ಕೇಂದ್ರದ ವಿವಿಧ ಚಟುವಟಿಕೆಗಳು, ಉಪಕೇಂದ್ರಗಳ ಬೆಳವಣಿಗೆ ಮತ್ತು ಭಾನುವಾರದಂದು ಸತ್ಸಂಗವನ್ನು ನಡೆಸುವ ಸ್ಥಳ ಇವುಗಳನ್ನು ಪರಿಶೀಲಿಸಲಾಯಿತು.

ತಾ. 11 ರಂದು, ಕೊಯಮತ್ತೂರಿನ ಪ್ರಶಿಕ್ಷಕರಿಗಾಗಿ ಎರಡು ಗಂಟೆಯ ಸಭೆಯನ್ನು ನಡೆಸಲಾಯಿತು. ಸೋ. ವಿಶ್ವನಾಥರಾವ್‌ರವರು ಇಲ್ಲಿಂದ ಪ್ರವಾಸದಲ್ಲಿ ಭಾಗಿಯಾದರು. ಬೆಳಗ್ಗೆ 11:30ಕ್ಕೆ ಸೋ.ದುರೈ ಮತ್ತು ತಂಡವು ರಾಮನಾಥಪುರಂನ ಯೆಲ್ಲೋ ಟ್ರೈನ್ ವಿಶೇಷ ಶಾಲೆಗೆ ಭೇಟಿಯಿತ್ತರು ಮತ್ತು ಅವರು ಸುಮಾರು ಮೂವತ್ತು ಮಂದಿ ಪೋಷಕರನ್ನು ಉದ್ದೇಶಿಸಿ ಸಹಜಮಾರ್ಗ ಧ್ಯಾನದ ಬಗೆಗೆ ಮಾತನಾಡಿ ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಅವರೆಲ್ಲಾ ಸಂಜೆ ಪೆರಿಯನಾಯ್ಕನಪಾಳ್ಯಂನ ಸಹೋದರರೊಬ್ಬರ ಮನೆಗೆ ಭೇಟಿಯಿತ್ತು ಅಲ್ಲಿದ್ದ ಕೆಲವು ಅತಿಥಿಗಳು ಹಾಗು ಸಾಧನೆಯನ್ನು ನಿಲ್ಲಿಸಿರುವ ಕೆಲ ಅಭ್ಯಾಸಿಗಳಿಗೆ ಸಹಜಮಾರ್ಗದ ಬಗೆಗೆ ತಿಳಿಸಿಕೊಟ್ಟರು. ಮೇಟ್ಟುಪಾಳ್ಯಂನಲ್ಲಿ ನೆರೆದಿದ್ದ 10 ಅತಿಥಿಗಳಿಗೆ ಸಹಜಮಾರ್ಗದ ಬಗೆಗೆ ತಿಳಿಸಿದ ಸೋ. ದುರೈಯವರು ಅಭ್ಯಾಸಿಗಳೊಂದಿಗೆ ಸಂವಾದಾತ್ಮಕ ಸಭೆಯನ್ನು ಕೂಡ ನಡೆಸಿದರು.

ತಾ. 12 ರಂದು ಅವರು ಕರುಮಾತಂಪಟ್ಟಿಗೆ ತೆರಳಿದರು. ಮುಕ್ತಸಭೆಯ ಜೊತೆಗೆ ಅಭ್ಯಾಸಿಗಳೊಂದಿಗೆ ಒಂದು ಸಭೆಯನ್ನು ಕೂಡ ಒಳಗೊಂಡಿದ್ದ ಅರ್ಧ ದಿನದ ಈ ಕಾರ್ಯಕ್ರಮವು ಮಧ್ಯಾಹ್ನದ ಭೋಜನದೊಂದಿಗೆ ಮುಕ್ತಾಯಗೊಂಡಿತು. ನಂತರ 10 ಅಭ್ಯಾಸಿಗಳು ಸತ್ಸಂಗಕ್ಕಾಗಿ ನೆರೆದಿದ್ದ ಸರವಣಂಪಟ್ಟಿಗೆ ಸಣ್ಣ ಭೇಟಿಯೊಂದನ್ನಿತ್ತರು. ಮಿಷನ್ನಿನ ವಾಚನಾಲಯವಿರುವ ಕೊಯಮತ್ತೂರಿನ ಆರ್. ಎಸ್. ಪುರಂ ಹಾಲ್‌ನಲ್ಲಿ 170 ಅಭ್ಯಾಸಿಗಳು ಸೇರಿದ್ದರು. ಒಂದು ಸಂವಾದಾತ್ಮಕ ಸಭೆಯ ನಂತರ ರಾತ್ರಿಯ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ತಾ. 13 ರಂದು, ಗೋಬಿಚೆಟ್ಟಿಪಾಳ್ಯಂನಲ್ಲಿ 120 ಅಭ್ಯಾಸಿಗಳು ಪಾಲ್ಗೊಂಡ ಸಂವಾದಾತ್ಮಕ ಸಭೆಯೊಂದರಲ್ಲಿ ಅಭ್ಯಾಸಿಗಳ ಭಾಷಣಗಳು, ಪ್ರಶ್ನೋತ್ತರಗಳು ಹಾಗು ವಿವರಣೆಗಳು ಇದ್ದುವು. ಈರೋಡಿನ ಆಶ್ರಮದಲ್ಲಿ, ಈರೋಡು ಹಾಗು ಸುತ್ತಮುತ್ತಲಿನ ಕೇಂದ್ರಗಳಾದ ಭವಾನಿ, ಪೆರುಂದುರೈ ಮತ್ತು ಗೋಬಿಚೆಟ್ಟಿಪಾಳ್ಯಂನಿಂದ 120 ಅಭ್ಯಾಸಿಗಳು ಸೇರಿದ್ದರು. ತಾ. 14ರಂದು, ತಿರುಚೆಂಗೋಡ್ ಕೇಂದ್ರದಲ್ಲಿ, ನಮಕ್ಕಾಲ್, ರಾಸಿಪುರಂ ಮತ್ತು ಕೋಮಾರಪಾಳ್ಯಂಗಳಿಗೆ ಸೇರಿದ 120 ಅಭ್ಯಾಸಿಗಳು ಕೂಡ ಸೇರಿದ್ದರು. ಸಂಜೆ, ಸಹೋದರರೊಬ್ಬರ ಮನೆಯಲ್ಲಿ ಈರೋಡಿನ 160 ಅಭ್ಯಾಸಿಗಳೊಂದಿಗೆ ಎರಡು ಗಂಟೆಗಳ ಸಭೆಯೊಂದು ನಡೆಯಿತು.

ತಾ.15 ರಂದು ಬೆಳಗ್ಗೆ ಚೆಟ್ಟಿಪಾಳ್ಯಂನ ಹಳೆಯ ಆಶ್ರಮದಲ್ಲಿ 15 ಪ್ರಶಿಕ್ಷಕರಿಗಾಗಿ ಸಭೆಯೊಂದನ್ನು ನಡೆಸಲಾಯಿತು. ಮಧ್ಯಾಹ್ನ NIFT-TEA ಶಿಕ್ಷಣಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಮುಕ್ತಸಭೆಯಲ್ಲಿ 60 ವಿದ್ಯಾರ್ಥಿಗಳು ಹಾಗು ಅಧ್ಯಾಪಕರುಗಳು ಸೇರಿದ್ದರು.

ತಾ. 16 ರಂದು, ತಿರುಪ್ಪೂರು ಹಾಗು ಹತ್ತಿರದ ಕೇಂದ್ರಗಳ ಅಭ್ಯಾಸಿಗಳಿಗಾಗಿ ಪೂರ್ಣ ದಿನದ ಕಾರ್ಯಕ್ರಮವೊಂದನ್ನು ಡಿಜೆ ಪಾರ್ಕಿನಲ್ಲಿ ನಡೆಸಲಾಯಿತು. ಬೆಳಗಿನ ಸತ್ಸಂಗದಲ್ಲಿ 1050 ಅಭ್ಯಾಸಿಗಳು ಭಾಗವಹಿಸಿದರು. ಉಪಾಹಾರದ ನಂತರ ಒಂದು ಸಂವಾದಾತ್ಮಕ ಸಭೆಯಿದ್ದಿತು. ಇದರ ನಂತರ 'ಪಿಕ್ ಅಂಡ್ ಟಾಕ್' ಮತ್ತು ಪ್ರಶ್ನೋತ್ತರದ ಅವಧಿಗಳಿದ್ದವು.



ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ

## ಕ್ರೆಸ್ಟ್‌ನ ನಿರ್ದೇಶಕರ ಪ್ರವಾಸ

### ಪನ್ವೇಲ್ ಆಶ್ರಮ, ಮುಂಬಯಿ.

ಬೆಂಗಳೂರಿನ ಕ್ರೆಸ್ಟ್‌ನ ನಿರ್ದೇಶಕರಾದ ಸೋ. ಮೋಹನ್‌ದಾಸ್ ಹೆಗ್ಡೆಯವರು ನವೆಂಬರ್ 9 ರಂದು ಮುಂಬಯಿಯ ಪನ್ವೇಲ್ ಆಶ್ರಮಕ್ಕೆ ಭೇಟಿಯಿತ್ತರು. ಅವರು ದಿನನಿತ್ಯದ ಸಾಧನೆಯ ಪ್ರಾಮುಖ್ಯತೆ ಹಾಗು ಅವಶ್ಯಕತೆಯ ಬಗೆಗೆ ಅಭ್ಯಾಸಿಗಳಿಗೆ ತಿಳಿಸಿ ಹೇಳಿದರು. ನಾವು ಹತ್ತು ನಿಯಮಗಳನ್ನು ಪಾಲಿಸುವ ಮೂಲಕ ಬೆಳಗ್ಗೆ ರಾತ್ರಿಗಳೂ ಸೇರಿದಂತೆ ದಿನವಿಡೀ ಸಹಜಮಾರ್ಗ ಜೀವನವನ್ನು ನಡೆಸ ಬೇಕು ಎಂದು ಪುನರುಚ್ಚರಿಸಿದರು. ಅವರು ಲಾಲಾಜಿ ಹಾಗು ಬಾಬೂಜಿಯವರ ಕೆಲವು ಮುಖ್ಯ ಭೋಧನೆಗಳನ್ನು ಅಭ್ಯಾಸಿಗಳಿಗೆ ನೆನಪಿಸಿದರು.

### ತಿರುಪ್ಪೂರು

ಸೋ. ಮೋಹನ್‌ದಾಸ್ ಹೆಗ್ಡೆಯವರು ನವೆಂಬರ್ 28 ರಂದು ತಿರುಪ್ಪೂರಿಗೆ ಆಗಮಿಸಿದರು. ಪ್ರಶಿಕ್ಷಕರಿಗಾಗಿ "ನನ್ನ ಸ್ಥಿತಿಯನ್ನು ಅರಿಯುವುದು" ಎಂಬ ಕಾರ್ಯಕ್ರಮವನ್ನು ಡಿಜೆ ಪಾರ್ಕಿನಲ್ಲಿ ನಡೆಸಲಾಯಿತು. ಪ್ರಶಿಕ್ಷಕರಿಗೆ 10 ನಿಮಿಷಗಳ ಕಾಲ ಧ್ಯಾನ ಮಾಡಲು ಹೇಳಿದ ಅವರು ನಂತರ ಪ್ರತಿಯೊಬ್ಬರಿಗೂ ಧ್ಯಾನದ ಸಮಯದಲ್ಲಿ ಅವರಿಗಾದ ಅನುಭವವನ್ನು ತಮ್ಮ ದಿನಚರಿಯಲ್ಲಿ ಬರೆಯಲು ಹೇಳಿದರು. ಅವರು ಕ್ರೆಸ್ಟ್‌ನಲ್ಲಿ ನಡೆಯುತ್ತಿರುವ ವಿವಿಧ ಚಟುವಟಿಕೆಗಳ ಬಗೆಗೆ ಸೂಕ್ಷ್ಮವಾಗಿ ವಿವರಿಸಿದರು. ಧ್ಯಾನದ ಸಮಯದಲ್ಲಿ ಗಮನಿಸಬೇಕಾದ ಮೂರು ವಿಷಯಗಳ ಬಗೆಗೂ ಕೂಡ ಅವರು ಮಾತನಾಡಿದರು – ಆಸನ, ಸ್ಥಿತಿ, ಅನುಭವ ಮತ್ತು ವಿಧಾನ.

ನವೆಂಬರ್ 29ರಂದು, ತಿರುಪ್ಪೂರು ಹಾಗು ಹತ್ತಿರದ ಕೇಂದ್ರಗಳ 140 ಯುವ ಅಭ್ಯಾಸಿಗಳಿಗಾಗಿ ಎರಡು ದಿನದ "ಸಹಜಮಾರ್ಗದ ಸೈನಿಕರು" ಎಂಬ



ಕಾರ್ಯಕ್ರಮವನ್ನು ನಡೆಸಲಾಯಿತು. ಬೆಳಗ್ಗೆ 4:30ಕ್ಕೆ ಏಳುವುದರೊಂದಿಗೆ, ವೈಯಕ್ತಿಕ ಧ್ಯಾನ ಹಾಗು ಶಾರೀರಿಕ ವ್ಯಾಯಾಮಗಳ ನಂತರ 7:30 ಕ್ಕೆ ಸತ್ಸಂಗ. ಉಪಾಹಾರದ ನಂತರ, "ಸ್ವಯಂ ಸೇವಕರ ಗುಣಗಳು" "ಸ್ವಯಂ ಸೇವಕರ ಪಾತ್ರ" ಮತ್ತು " ತಾರುಣ್ಯದ ಹುರುಪನ್ನು ಉಳಿಸಿಕೊಳ್ಳುವುದು" ಮುಂತಾದ ವಿವಿಧ ವಿಷಯಗಳ ಬಗೆಗೆ ಮಾಹಿತಿಯನ್ನು ನೀಡಲಾಯಿತು. ಮಧ್ಯಾಹ್ನ ಸ್ವಯಂಸೇವಕರ ಗುಣಗಳು, ಪಾತ್ರ ಮತ್ತು ಬದ್ಧತೆಯ ಕುರಿತಾಗಿ ಸಂವಾದಾತ್ಮಕ ಸಭೆಯೊಂದನ್ನು ನಡೆಸಲಾಯಿತು. ಸಂಜೆ ಚಲನಚಿತ್ರವೊಂದನ್ನು ತೋರಿಸಲಾಯಿತು. ಅನೌಪಚಾರಿಕ ಸಂವಾದದೊಂದಿಗೆ ರಾತ್ರಿ 9:30ಕ್ಕೆ ಅಂದಿನ ಕಾರ್ಯಕ್ರಮ ಮುಗಿಯಿತು.

ಎರಡನೆಯ ದಿನ, "ಸಾಧನೆಯ ಸೂಕ್ಷ್ಮ ಅಂಶಗಳು," "ಹತ್ತು ನಿಯಮಗಳು – ನನ್ನ ವಿಧಾನ" ಮತ್ತು "ಸಹಜಮಾರ್ಗದ ಜೀವನ ರೀತಿ" ಈ ವಿಷಯಗಳ ಮೇಲೆ ಕಾರ್ಯಕ್ರಮಗಳಿದ್ದುವು. ಮಧ್ಯಾಹ್ನ ಒಂದು ಚಲನಚಿತ್ರವನ್ನು ತೋರಿಸಲಾಯಿತು. ಕಾರ್ಯಕ್ರಮ ಸಂಜೆ 6 ಗಂಟೆಗೆ ಮುಕ್ತಾಯಗೊಂಡಿತು. ಎಲ್ಲ ಯುವಕರೂ ಉತ್ಸಾಹದಿಂದಿದ್ದು ಸಹಜಮಾರ್ಗದ ಸೈನಿಕರಾಗುವ ನಿರ್ಧಾರ ತಳೆದಿದ್ದರು.

## ಮಣಪ್ಪಾಕಂಗೆ ಅಭ್ಯಾಸಿಗಳ ಭೇಟಿ

ಹಲ್ದ್ವಾನಿ, ಶೋಲಾಪುರ ಮತ್ತು ಕೊಲ್ಲಾಪುರ ಕೇಂದ್ರಗಳಿಗೆ ಸೇರಿದ 323 ಅಭ್ಯಾಸಿಗಳು ಮೂರು ದಿನಗಳ ಸಮಾವೇಶದಲ್ಲಿ ಪಾಲ್ಗೊಳ್ಳಲು ಡಿ. 10ರಿಂದ 12ರವರೆಗೆ ಮಣಪ್ಪಾಕಂನ ಆಶ್ರಮಕ್ಕೆ ಭೇಟಿಯಿತ್ತರು. ಆ ಸಮಯದಲ್ಲಿ ಅವರಿಗಾಗಿ 'ಗುರುಗಳ ಬೋಧನೆಗಳು', 'ಮೂರು A ಗಳು', ಅವರ ಸಂದೇಹಗಳನ್ನು ಪರಿಹರಿಸಲು ಒಂದು ಪ್ರಶ್ನೋತ್ತರ ಅವಧಿ ಮತ್ತು ಪ್ರಶಿಕ್ಷಕರಿಗಾಗಿ ಸಭೆಯೊಂದನ್ನು ಆಯೋಜಿಸಲಾಗಿದ್ದಿತು.



## ಹೊಸ ಪ್ರಕಟನೆಗಳ ಬಿಡುಗಡೆ




ಹಾರ್ಟ್‌ಸ್ಪೀಕ್ 2001
ಆಂಗ್ಲ




ದ ಪ್ರಿನ್ಸಿಪಲ್ಸ್ ಆಫ್ ಸಹಜ್‌ಮಾರ್ಗ್ ಭಾಗ–16
(ದ ಗಿಫ್ಟ್ ಆಫ್ ಲವ್)
ಆಂಗ್ಲ




ಹಾರ್ಟ್‌ಸ್ಪೀಕ್ 2011
ತೆಲುಗು

## ಹೊಸ ನೇಮಕಾತಿಗಳು

**ಕ್ಯಾಪ್ಟನ್ ವಿನೀತ್ ರಣಾವತ್**
ಜಂಟಿ ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ

**ಶ್ರೀಕುಮಾರ್ ಕೇಶವನ್**
ಅಲುವಾ ಕೇಂದ್ರದ ಉಸ್ತುವಾರಿ

**ರವೀಂದ್ರ ಕುಮಾರ್ ಸಿನ್ಹ**
ಷಹಜಹಾನಪುರ ಆಶ್ರಮ ಮ್ಯಾನೇಜರ್

## ಯು–ಕನೆಕ್ಟ್ ಕಾರ್ಯಕ್ರಮಗಳು

### ಅಧ್ಯಾಪಕರ ತರಬೇತಿ, ವಾರ್ಧಾ, ಮಹಾರಾಷ್ಟ್ರ




ಈ ವಲಯದ ಯು–ಕನೆಕ್ಟ್ ಅಧ್ಯಾಪಕರುಗಳಿಗಾಗಿ ಎರಡು ದಿನದ ಕಾರ್ಯಕ್ರಮ ಹಾಗು 'ಮಾಕ್ ಸೆಷನ್' ಒಂದನ್ನು ವಾರ್ಧಾ ಆಶ್ರಮದಲ್ಲಿ ನವೆಂಬರ್ 29 ಮತ್ತು 30ರಂದು ನಡೆಸಲಾಯಿತು. ನಾಗಪುರ, ಚಂದ್ರಾಪುರ, ವಾರ್ಧಾ, ಯಾವತ್ಮಲ್ ಮತ್ತು ಭಂಡಾರ ಕೇಂದ್ರಗಳ ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿದರು. ತರಬೇತಿ ಪಡೆದಿರುವ 6 ಮಂದಿ ಯು–ಕನೆಕ್ಟ್‌ನ ಅಧ್ಯಾಪಕರು ಹಿಂದಿ ಮತ್ತು ಮರಾಠಿಯಲ್ಲಿ 'ಮಾಕ್ ಸೆಷನ್' ನಡೆಸಿಕೊಟ್ಟರು. ವಿವಿಧ ಮಾನವೀಯ ಮೌಲ್ಯಗಳನ್ನು ಬಿಂಬಿಸಲು ಮತ್ತು ಅಳವಡಿಸುವ ಸಲುವಾಗಿ ಆಟಗಳು ಮತ್ತು ಚಟುಚಟಿಕೆಗಳನ್ನು ಆಯೋಜಿಸಲಾಗಿತ್ತು.

### ಜೈಪುರ, ರಾಜಸ್ಥಾನ.

ಯು–ಕನೆಕ್ಟ್ ವತಿಯಿಂದ ನಡೆದ ಮೊದಲ ಸ್ವ ವಿಕಸನ ಶಿಬಿರ(SDP)ದ ಸದಸ್ಯರ ಸನ್ಮಾನ ಸಮಾರಂಭವನ್ನು ನವೆಂಬರ್ 16ರ ಭಾನುವಾರದಂದು, ವಲಯದ ಆಶ್ರಮದಲ್ಲಿ ನಡೆಸಲಾಯಿತು. ಆರ್ಚ್ ಪಾಯಿಂಟ್ ಕನ್ಸಲ್ಟೆಂಟ್ಸ್ ಪ್ರೈ.ಲಿ. ನಲ್ಲಿ ಕಲಿತ ಆರು ಸದಸ್ಯರನ್ನು ಸನ್ಮಾನಿಸಲಾಯಿತು. ಈ ಸಮಾರಂಭವು ಯು–ಕನೆಕ್ಟ್‌ನ ಧ್ಯೇಯ ವಾಕ್ಯದ ಮೇಲಿನ ಕಾರ್ಯಕ್ರಮದೊಂದಿಗೆ ಆರಂಭವಾಯಿತು. 16 ವಾರಗಳ ಕಾಲ ನಡೆದ ಈ SDP ಶಿಬಿರವು ಜುಲೈ 19, 2014 ಕ್ಕೆ ಮುಕ್ತಾಯವಾಯಿತು. ಈ ಕಾರ್ಯಕ್ರಮಕ್ಕೆ 17 ಸ್ವಯಂ ಸೇವಕರು ಅಧ್ಯಾಪಕರಾಗಿ, ಸಹಾಯಕರಾಗಿ, ಸಂಯೋಜಕರಾಗಿ, ಐಪಿ ತಜ್ಞರಾಗಿ ಹೀಗೆ ವಿವಿಧ ಸಾಮರ್ಥ್ಯಗಳಲ್ಲಿ ಸಹಕರಿಸಿದ್ದಾರೆ. ಭಾಗವಹಿಸಿದ ಸದಸ್ಯರಲ್ಲಿ ಇಬ್ಬರು ಆರಂಭದ ಬೈಠಕ್‌ಗಳನ್ನು ತೆಗೆದುಕೊಂಡಿದ್ದಾರೆ. ವಲಯ 7ರ ಸಂಯೋಜಕರಾದ ಸೋ. ಸಂದೀಪ್ ನಯ್ಯರ್‌ರವರು ಯು–ಕನೆಕ್ಟ್‌ನ ಮುಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅಭ್ಯಾಸಿಗಳನ್ನು ಆಹ್ವಾನಿಸಿದರು. ಭಾಗವಹಿಸಿದವರು ಕೂಡ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು ಮತ್ತು ತಮ್ಮೊಳಗಾಗಿರುವ ಬದಲಾವಣೆಯನ್ನು ಗಮನಿಸಿ ಸಮತೋಲಿತ ಜೀವನವನ್ನು ನಡೆಸಲು ತಾವು ಗಳಿಸಿರುವ ಕೌಶಲ್ಯಗಳ ಬಗೆಗೆ ಚಿಂತನೆ ಮಾಡಿದರು.

ನವೆಂಬರ್ 29ರಂದು ಜೈಪುರದಲ್ಲಿ ಎರಡನೆಯ SDPಯನ್ನು ಆರಂಭಿಸಲಾಯಿತು.

### ಚಂಡೀಗಢ, ಪಂಜಾಬ್.



ಪಂಜಾಬ್ ವಿಶ್ವವಿದ್ಯಾಲಯದಲ್ಲಿ 12 ವಾರಗಳ SDP ಸರ್ಟಿಫಿಕೆಟ್ ಕಾರ್ಯಕ್ರಮದ ಉದ್ಘಾಟನಾ ಕಾರ್ಯ ನವೆಂಬರ್ 22 ರಂದು ನಡೆಯಿತು. ಉಪಕುಲಪತಿ ಪ್ರೊ. ಗ್ರೋವರ್‌ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಈ ಸಮಾರಂಭದಲ್ಲಿ ಭಾಗಿಯಾಗಿರುವುದಕ್ಕೆ ಹರುಷ ವ್ಯಕ್ತಪಡಿಸಿ, ಅವರನ್ನು ಆತ್ಮಾವಲೋಕನಕ್ಕೆ ಇದು ಹೇಗೆ ಪ್ರೇರೇಪಿಸಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮವು ಬೆಳೆದು 3000 ವಿದ್ಯಾರ್ಥಿಗಳನ್ನು ತಲುಪಬೇಕು ಎಂದು ಅವರು ಒತ್ತಿ ಹೇಳಿದರು. ಸ್ವ ವಿಕಸನವು ಇಂದು ಅತ್ಯಗತ್ಯವಾಗಿದ್ದು ವಾಸ್ತವವಾಗಿ ಎಲ್ಲ ವಿದ್ಯಾರ್ಥಿಗಳೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಅವರು ಹೇಳಿದರು.

ಮಿಷನ್ನಿನ ಅನೇಕ ಅಭ್ಯಾಸಿಗಳು ಹಾಗು ಪ್ರಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಲಯ 10ರ ಉಸ್ತುವಾರಿ ನಿವೃತ್ತ ಮೇಜರ್ ಜನರಲ್ ಹರ್ಭಜನ್ ಮತ್ತು ಯು–ಕನೆಕ್ಟ್‌ನ ಪ್ರಾದೇಶಿಕ ಸಂಯೋಜಕ ಸೋ. ಜುಗಲ್ ಕಿಶೋರ್ ಇವರುಗಳು ಮಿಷನ್ನನ್ನು ಪ್ರತಿನಿಧಿಸಿ ಎಲ್ಲರೊಡನೆಯೂ ಉತ್ತಮವಾಗಿ ಮಾತನಾಡಿದರು.

### ಗ್ವಾಲಿಯರ್, ಮಧ್ಯಪ್ರದೇಶ.

ಗ್ವಾಲಿಯರ್‌ನ ಬಿಎಡ್ ಕಾಲೇಜ್ ಆಫ್ ಮಾಧವ ಶಿಕ್ಷಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಅ. 20ರಂದು ಯುವ ಜನತೆಯು ಅಪೇಕ್ಷಿಸಬೇಕಾದಂತಹ ಜೀವನದ ಮೌಲ್ಯಗಳನ್ನು ತಿಳಿಸಿಕೊಡುವ ಉದ್ದೇಶದೊಂದಿಗೆ SDP ಯನ್ನು ಪ್ರಾರಂಭಿಸಲಾಯಿತು: ಅವರು ಒಂದು ಆಧ್ಯಾತ್ಮಿಕ ಗುರಿಯ ಮೇಲೆ ಕೇಂದ್ರೀಕೃತವಾದ ಸಮತೋಲಿತ ಜೀವನವನ್ನು ಮತ್ತು ನೈತಿಕವಾದ ಪ್ರಾಪಂಚಿಕ ಜೀವನವನ್ನು ಸಾಧಿಸಲು ಸಹಾಯ ಮಾಡಿ ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗುವುದು. ತರಗತಿಗಳನ್ನು ವಾರದ ಎರಡು ದಿನಗಳಾದ ಸೋಮವಾರ ಹಾಗು ಮಂಗಳವಾರದಂದು ನಡೆಸಲಾಗುತ್ತದೆ. 11ನೆಯ ತರಗತಿಯ ಸಮಯದಲ್ಲಿ ಸುಮಾರು 25 ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಪ್ರಾಂಶುಪಾಲರು, ನಾಲ್ವರು ಅಧ್ಯಾಪಕರು ಮತ್ತು ಯು–ಕನೆಕ್ಟ್‌ನ ತಂಡದ ಸದಸ್ಯರೊಂದಿಗೆ ಗ್ವಾಲಿಯರ್ ಆಶ್ರಮಕ್ಕೆ ಭೇಟಿಯಿತ್ತರು. ಇದುವರೆಗೂ 13 ವಿದ್ಯಾರ್ಥಿಗಳು ಹಾಗು ಪ್ರಾಂಶುಪಾಲರು ಸಹಜಮಾರ್ಗವನ್ನು ಆರಂಭಿಸಿದ್ದು ವಾರದ ಸತ್ಸಂಗವನ್ನು ಕಾಲೇಜಿನಲ್ಲೇ ನಡೆಸಲು ಅನುಮತಿಯನ್ನು ಕೂಡ ಪಡೆದಿದ್ದಾರೆ.










## ಮಕ್ಕಳ ಕಾರ್ಯಕ್ರಮಗಳು

### 'ಉಡಾನ್', ದೆಹಲಿ ವಲಯದ ಆಶ್ರಮ

ನವೆಂಬರ್ 2ರಂದು, ಯುವ ತಂಡವೊಂದು ಯೋಜಿಸಿ, ಆಯೋಜಿಸಿ, ನಡೆಸಿದ ಪೂರ್ಣ ದಿನದ ಕಾರ್ಯಕ್ರಮದಲ್ಲಿ ಸುಮಾರು 131 ಮಕ್ಕಳು ಭಾಗವಹಿಸಿದರು. ಪೋಷಕರೊಂದಿಗಿದ್ದ ಐದು ವರುಷದ ಕೆಳಗಿನ ಮಕ್ಕಳಿಗಾಗಿ 'ಗುರುಗಳು ಹೇಳುತ್ತಾರೆ', ಓಟ, ಕರಕುಶಲ, ಗಾಯನ ಮತ್ತು ನೃತ್ಯ ಮುಂತಾದುವುಗಳನ್ನು ಆಯೋಜಿಸಿದ್ದರೆ ದೊಡ್ಡ ಮಕ್ಕಳಿಗಾಗಿ ಓಟ, ಹಗ್ಗ ಜಗ್ಗುವ ಸ್ಪರ್ಧೆ ಮುಂತಾದುವುಗಳನ್ನು ಆಯೋಜಿಸಲಾಗಿತ್ತು. 'ಕಸದಿಂದ ರಸ' ಎಂಬ ಆಟದಲ್ಲಿ ಅವರ ಸೃಜನಶೀಲತೆ ಬೆಳಕಿಗೆ ಬಂತು. ದಿನದ ಕೊನೆಗೆ ಅವರು 'ಟ್ರೆಷರ್ ಹಂಟ್' ಆಟವನ್ನಾಡಿದರು. ಪ್ರಕೃತಿ ಹಾಗು ಪರಿಸರದೊಂದಿಗೆ ಪ್ರೇಮವನ್ನು ಬೆಳೆಸಿ ಕೊಳ್ಳುವುದನ್ನು ಪ್ರೋತ್ಸಾಹಿಸುವ ಸಲುವಾಗಿ ನಿಧಿಯಾಗಿ ಅವರಿಗೆ ಸಸ್ಯಗಳನ್ನು ಕೊಡುಗೆಯಾಗಿ ನೀಡಲಾಯಿತು. ಕೊನೆಯಲ್ಲಿ, ಸೋದರರೊಬ್ಬರು ಜೀವನದಲ್ಲಿ ಇರಬೇಕಾದ ಶಿಸ್ತಿನ ಕುರಿತು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು.

### ಮೊರಾದಬಾದ್, ಉತ್ತರ ಪ್ರದೇಶ



ಡಿ. 7 ರಂದು, 25 ಮಕ್ಕಳು 'ಗುರುಗಳಿಗೆ ಧನ್ಯವಾದಗಳು' ಎಂಬ ವಿಷಯದ ಗ್ರೀಟಿಂಗ್ ಕಾರ್ಡ್ ಸ್ಪರ್ಧೆಯಲ್ಲಿ ಭಾಗವಹಿಸಿದರು. ಸುಂದರವಾದ ಕಾರ್ಡ್‌ಗಳನ್ನು ನಿರ್ಮಿಸುವ ಸಲುವಾಗಿ ಪರಸ್ಪರ ಸಹಕಾರದೊಂದಿಗೆ ಕೆಲಸ ಮಾಡುವಾಗ ಅವರಲ್ಲಿ ಉತ್ಸಾಹ, ವ್ಯವಸ್ಥಿತ ಸಹಕಾರ ಮತ್ತು ಏಕತೆ ಕಂಡುಬಂದಿತು. ಪ್ರೇಮ ಮತ್ತು ಅವರ ಪ್ರಯತ್ನಕ್ಕೆ ಮೆಚ್ಚುಗೆಯ ಸಲುವಾಗಿ ಬಹುಮಾನಗಳನ್ನು ವಯಸ್ಸಿಗೆ ಅನುಗುಣವಾಗಿ ವಿತರಿಸಲಾಯಿತು.

### ಗೋವ

ನವೆಂಬರ್ 16ರಂದು, ಅಭ್ಯಾಸಿಗಳ ಮಕ್ಕಳು ಮತ್ತು ಅವರ ಸ್ನೇಹಿತರಿಗಾಗಿ ಚಿತ್ರಕಲೆ ಮತ್ತು ಗ್ರೀಟಿಂಗ್ ಕಾರ್ಡ್ ತಯಾರಿಕಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಉಪಾಹಾರ ಸೇವಿಸಿದ ನಂತರ ಮಕ್ಕಳು ಆಶ್ರಮದಲ್ಲಿ ಆಡಿ ಆನಂದಿಸಿದರು. ಅವರು ಗುರುಗಳ ವೀಡಿಯೊ ಒಂದನ್ನು ವೀಕ್ಷಿಸಿದರು. ನಂತರ ಸೋದರಿಯೊಬ್ಬರು ಅವರಿಗೆ ಮಿಷನ್ ಹಾಗು ಅದರ ಗುರಿಯ ಬಗೆಗೆ ವಿವರಿಸಿ ಯಾವ ರೀತಿ ಅದು ಮಕ್ಕಳಿಗೆ ತಮ್ಮನ್ನು ಉತ್ತಮ ಪಡಿಸಿಕೊಂಡು, ಪರಿಪೂರ್ಣತೆಯೆಡೆಗೆ ಸಾಗಿ, ಉತ್ತಮ ನಾಗರೀಕರಾಗಲು ಸಹಕರಿಸುತ್ತದೆ ಎಂದು ವಿವರಿಸಿದರು.

### ಬೆಂಗಳೂರು, ಕರ್ನಾಟಕ

ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ದಿನವನ್ನು ವಿಸ್ತೃತ ದಿನದ ಕಾರ್ಯಕ್ರಮದೊಂದಿಗೆ ಬನಶಂಕರಿ ಆಶ್ರಮದಲ್ಲಿ ಆಚರಿಸಲಾಯಿತು. ಮಕ್ಕಳು ಬೆಳಗಿನ ಸತ್ಸಂಗದ ಸಮಯದಲ್ಲಿ ತಮ್ಮ ಹಾಡು ಹಾಗು ನಾಟಕಗಳ ಅಭ್ಯಾಸ ನಡೆಸಿದುದರಿಂದ ಆಶ್ರಮದೆಲ್ಲೆಡೆ ಚಟುವಟಿಕೆಯಿತ್ತು.

ಗುರುಗಳ 'ಪೇರೆಂಟ್ ಹುಡ್' ಡಿವಿಡಿ ಯಿಂದ ಭಾಷಣದ ತುಣುಕುಗಳು ಹಾಗು ಚಿಲ್ಡ್ರನ್ ಸೆಂಟರ್‌ನಲ್ಲಿ ಮಕ್ಕಳ ಚಟುವಟಿಕೆಗಳನ್ನು ಪ್ರದರ್ಶಿಸುವ ಒಂದು ಕಿರುಚಿತ್ರವನ್ನು ಧ್ಯಾನದ ನಂತರ ಎಲ್ಲ ಅಭ್ಯಾಸಿಗಳಿಗೂ ತೋರಿಸಲಾಯಿತು. ಕಾರ್ಯಕ್ರಮಗಳು ಅಭ್ಯಾಸಿಗಳನ್ನು ಮತ್ತೆ ತಮ್ಮ ಬಾಲ್ಯಕ್ಕೆ ಕರೆದುಕೊಂಡು ಹೋಗುವ ಉದ್ದೇಶವನ್ನು ಹೊಂದಿದ್ದವು. ಅವರು ಒಂದು ಆಟವಾಡಿದ ನಂತರ ಅಭ್ಯಾಸಿಗಳನ್ನು ಗುಂಪುಗಳಲ್ಲಿ ವಿಂಗಡಿಸಿ ಮಕ್ಕಳನ್ನು ಕುರಿತ ಗುರುಗಳ ಹೇಳಿಕೆಯನ್ನು ಅವರಿಗೆ ನೀಡಲಾಯಿತು. ಅವರು ಅದನ್ನು ಅವಲೋಕಿಸಿ, ಚರ್ಚಿಸಿ ಅದನ್ನು ಪದ್ಯ ಅಥವಾ ನಾಟಕದ ರೂಪದಲ್ಲಿ ಪ್ರಸ್ತುತ ಪಡಿಸಬೇಕಾದುದು ಅವರಿಗೆ ನೀಡಿದ ಸವಾಲಾಗಿತ್ತು.

ಆರು ವರುಷದ ಕೆಳಗಿನ ಮಕ್ಕಳು ಅಕ್ಕರೆಯಿಂದ ಕ್ರಿಯಾಶೀಲ ಹಾಡೊಂದನ್ನು ಪ್ರದರ್ಶಿಸಿದರು. ಆರರಿಂದ ಒಂಬತ್ತು ವರುಷದೊಳಗಿನ ಮಕ್ಕಳು ಒಂದು ಹಾಡು ಮತ್ತು ಸಣ್ಣ ನಾಟಕವನ್ನು ಪ್ರದರ್ಶಿಸಿದರು. ಅಭ್ಯಾಸಿ ತಂಡಗಳ ಪ್ರದರ್ಶನದ ನಂತರ ಒಂಬತ್ತು ವರುಷದ ಮೇಲಿನ ಮಕ್ಕಳು ಒಂದು ಹಾಡು ಮತ್ತು ಒಂದು ನಾಟಕವನ್ನು ಪ್ರದರ್ಶಿಸಿದರು. ಅವರು ಈ ನಾಟಕವನ್ನು ಕೇವಲ ಬೆಳಗಿನಿಂದ ಅಭ್ಯಾಸ ಮಾಡಿದ್ದರಾದರೂ ವಿಶ್ವಾಸದಿಂದ ಸುಂದರವಾಗಿ ಪ್ರದರ್ಶಿಸಿದರು. ಪೋಷಕರೆಲ್ಲರೂ ಸಾಕಷ್ಟು ರೋಮಾಂಚಿತರಾದರು ಮತ್ತು ಕಾರ್ಯಕ್ರಮದಿಂದ ಸಂತಸಪಟ್ಟರು.







## ಉ.ಪ್ರ ಪ್ರಶಿಕ್ಷಕರ ವಿಚಾರ ಸಂಕಿರಣ

### ಷಹಜಹಾನಪುರ

ನವೆಂಬರ್ 12ರಿಂದ 16ರವರೆಗೆ ನಡೆದ ಐದು ದಿನಗಳ ವಿಚಾರಸಂಕಿರಣದಲ್ಲಿ ಉತ್ತರಪ್ರದೇಶದ 150 ಪ್ರಶಿಕ್ಷಕರು ಪಾಲ್ಗೊಂಡಿದ್ದರು. ತೀವ್ರತರ ಸಾಧನೆಯಿಂದ 2 ಮತ್ತು 10ನೇ ನಿಯಮಗಳನ್ನು ಪಾಲಿಸಿದರೆ ಪಡೆಯಬಹುದಾದ, ಅಲ್ಪತೆ ಮತ್ತು ಮುಗ್ಧತೆಯ ಪ್ರತೀಕವಾದ 'ವಿನಯ'ದ ಮೇಲೆ ಇದು ಕೇಂದ್ರೀಕೃತವಾಗಿದ್ದಿತು.

ನಡವಳಿಕೆ ಮತ್ತು ಚಾರಿತ್ರ್ಯದ ಅರಿವು ಮೂಡಿಸುವ ಪ್ರಯತ್ನವು ಯಶಸ್ವಿಯಾಯಿತು ಹಾಗು ತಮ್ಮನ್ನು ತಾವು ಗಮನಿಸಿ, ಪರಿವರ್ತನೆಗಾಗಿ ಪ್ರಾರ್ಥನಾಭಾವದಲ್ಲಿ ಕೇಳಿಕೊಳ್ಳುವ ಅಗತ್ಯವನ್ನು ಸಭೆಯ ಮುಕ್ತಾಯದ ಹಂತದಲ್ಲಿ ಸರ್ವರೂ ಕಂಡುಕೊಂಡರು. ಸಭೆಯ ಅತ್ಯುತ್ತಮ ಭಾಗವೆಂದರೆ ಪೂಜ್ಯ ಗುರುಗಳು ಸೃಷ್ಟಿಸಿದ ವಾತಾವರಣ. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲರಿಗೂ ಇದೊಂದು ವಿನೀತ ಮತ್ತು ತೀಕ್ಷ್ಣ ಅನುಭವವಾಗಿದ್ದಿತು.

## ಪಿಸುಮಾತುಗಳನ್ನು ಕುರಿತ ಕಾರ್ಯಕ್ರಮ

### ಹೈದರಾಬಾದ್, ಆಂಧ್ರಪ್ರದೇಶ

ಡಿಸೆಂಬರ್ 5ರಿಂದ 7ರವರೆಗೆ ಕಾನ್ಹಾ ಶಾಂತಿವನಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶ ಮತ್ತು ತೆಲಂಗಾಣದ 100 ಅಭ್ಯಾಸಿಗಳು ಭಾಗವಹಿಸಿದ್ದರು. ವಿಸ್ಪರ್ಸ್ ಓದುವ ಅಗತ್ಯದ ಬಗ್ಗೆ ಅರಿವು ಮೂಡಿಸಿ, ಅದನ್ನು ದೈನಂದಿನ ಸಾಧನೆಯ ಭಾಗವನ್ನಾಗಿ ಮಾಡಿಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿದ್ದಿತು. ಜೊತೆಗೆ, ಭಾನುವಾರದ ಸತ್ಸಂಗ ಹಾಗು ಇತರ ಆಧ್ಯಾತ್ಮಿಕ ಸಭೆಗಳಲ್ಲಿ ವಿಸ್ಪರ್ಸ್ ಅನ್ನು ಓದುವ ಬಗೆಯನ್ನು ಭಾಗಿಗಳಿಗೆ ತಿಳಿಸಿಕೊಡುವ ಗುರಿ ಹೊಂದಿತ್ತು.

ಕಾರ್ಯಕ್ರಮದಲ್ಲಿ ಸೂಕ್ತ ವಿಷಯಗಳಾದ – ವಿಸ್ಪರ್ಸ್‌ನ ಪ್ರಾಮುಖ್ಯತೆ, ವಿಸ್ಪರ್ಸ್, ಗುರುಗಳು ಮತ್ತು ಸೇವೆಗಳನ್ನು ತಿಳಿದುಕೊಳ್ಳುವ ಬಗೆ– ಇವುಗಳು ಸೇರಿದ್ದುವು. ಸಂದೇಶಗಳನ್ನು ಆಂಗ್ಲ ಮತ್ತು ತೆಲುಗು ಭಾಷೆಗಳಲ್ಲಿ ಓದಿ, ಅಭ್ಯಾಸಿಗಳಿಗೆ ಕೆಲಕಾಲ ಅವುಗಳ ಅರ್ಥದ ಮೇಲೆ ಧ್ಯಾನ ಮಾಡಲು ಸಮಯ ನೀಡಲಾಯಿತು. ಮೂರೂ ದಿನಗಳ ಕಾಲ ಇದನ್ನು ಮಾಡಲಾಗಿ, ಜೊತೆಯಲ್ಲಿ ಬಾಬೂಜಿಯವರ ವಿಡಿಯೋ, ಆಯ್ದ ವಿಷಯಗಳ ಬಗ್ಗೆ ಗುರುಗಳು ಹಾಗು ಕಮಲೇಶ್ ಭಾಯಿಯವರ ನೀಡಿದ ಉಪನ್ಯಾಸಗಳನ್ನು ಕೇಳಿಸಲಾಯಿತು.

ಆಯಾ ಕೇಂದ್ರಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹೇಗೆ ನಡೆಸಬೇಕೆಂಬುದನ್ನು ಆಯೋಜಕರು ತಿಳಿಸಿಕೊಟ್ಟರು. ಇಂತಹ ಕಾರ್ಯಕ್ರಮವು ಪ್ರಥಮ ಬಾರಿ ನಡೆದಿದ್ದು, ಸ್ವಯಂಸೇವಕರು ಇದು ಸರಾಗವಾಗಿ ನಡೆಯಲು ಸಹಾಯಕರಾದರು. ಈ ಸ್ಥಳದ ಸ್ತಬ್ಧ ಮತ್ತು ಪ್ರಶಾಂತ ವಾತಾವರಣವನ್ನು ಆಸ್ವಾದಿಸಿದ ಭಾಗಿಗಳು ಇಂತಹ ಕಾರ್ಯಕ್ರಮ ನಡೆಸಲು ಇದೇ ಸೂಕ್ತ ಪ್ರದೇಶವೆಂದು ಅಭಿಪ್ರಾಯ ಪಟ್ಟರು.

## ಹತ್ತು ನಿಯಮಗಳ ಬಗೆಗಿನ ಕಮ್ಮಟ

### ಇಂದೋರ್, ಮಧ್ಯ ಪ್ರದೇಶ

ಈ ವಸತಿಸಹಿತ ಕಾರ್ಯಕ್ರಮವನ್ನು ಡಿಸೆಂಬರ್ 12ರಿಂದ 14ರವರೆಗೆ ನಡೆಸಲಾಗಿದ್ದು, ಇಂದೋರ್ ಮತ್ತು ಸಮೀಪದ ಕೇಂದ್ರಗಳ 41 ಅಭ್ಯಾಸಿಗಳು ಪಾಲ್ಗೊಂಡರು. ಕಾರ್ಯಕ್ರಮವು ಡಿ.12ರಂದು ಸತ್ಸಂಗದೊಡನೆ ಪ್ರಾರಂಭವಾಯಿತು. ಪ್ರತಿಯೊಂದು ನಿಯಮವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಅದರ ಹಿಂದಿನ ತತ್ವ ಹಾಗು ಬಾಬೂಜಿ ಮಹಾರಾಜರ *ಹತ್ತು ನಿಯಮಗಳ ವ್ಯಾಖ್ಯಾನ* ದ ಪ್ರಕಾರ ಅದು ಹೇಗೆ ಅಭ್ಯಾಸಿಗೆ ತನ್ನ ಗುರಿ ಮುಟ್ಟಲು ಸಹಕಾರ ನೀಡಬಲ್ಲುದು ಎಂಬುದನ್ನು ತಿಳಿಸಲಾಯಿತು. ಅದರೊಂದಿಗೆ, ಪ್ರತಿ ನಿಯಮದ ಪ್ರಾಯೋಗಿಕತೆ, ಎದುರಿಸುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರಗಳನ್ನು ಸಹ ತಿಳಿಸಲಾಯಿತು.

ಕಾರ್ಯಕ್ರಮವು ಮುಂದುವರೆದಂತೆ, ಭಾಗಿಗಳು ಮತ್ತೂ ಹೆಚ್ಚು ಮಗ್ನರಾಗತೊಡಗಿದರು. ಅವರ ಅರಿವು ಆಳವಾಯಿತು ಮತ್ತು ನಿಯಮಗಳನ್ನು ಪಾಲಿಸುವ ಪ್ರೇರಣೆಯು ಹೃದಯದಲ್ಲಿ ಬಲವಾಯಿತು. ಈ ಕಾರ್ಯಕ್ರಮದ ಸಿದ್ಧತೆಯು ಒಂದು ತಿಂಗಳ ಮೊದಲೇ ಪ್ರಾರಂಭವಾಗಿತ್ತು. ಪ್ರತಿ ನಿಯಮದ ಬಗ್ಗೆ ಪ್ರಸ್ತುತಿಯನ್ನು ಎರಡು ಅಭ್ಯಾಸಿಗಳ ತಂಡವು ಸಿದ್ಧಪಡಿಸಿದ್ದು, ನಂತರ ಸಮೂಹ ಚರ್ಚೆಯನ್ನು ನಡೆಸಲಾಯಿತು.



ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ



## ತೆಲುಗು ಪ್ರಕಟನಾ ಕಮ್ಮಟ

### ಹೈದರಾಬಾದ್

ಪ್ರಕಟನೆಗೆ ಸಂಬಂಧಿಸಿದ ವಿವಿಧ ಕಾರ್ಯಗಳಿಗಾಗಿ ಪ್ರಸ್ತುತ ತಂಡಗಳ ವಿಸ್ತರಣೆ ಮತ್ತು ಹೊಸ ತಂಡಗಳ ನಿರ್ಮಾಣಕ್ಕಾಗಿ ನವೆಂಬರ್ 29 ಮತ್ತು 30ರಂದು ತುರ್ಮ್‌ಕುಂಟ ಆಶ್ರಮದಲ್ಲಿ ನಡೆಸಿದ ಕಾರ್ಯಾಗಾರದಲ್ಲಿ 100 ಅಭ್ಯಾಸಿಗಳು ಭಾಗವಹಿಸಿದ್ದರು.

ಮೊದಲನೆಯ ದಿನದಂದು ಈ ಕೆಳಗಿನ ತಂಡಗಳನ್ನು ರೂಪಿಸಲಾಯಿತು: ಪುಸ್ತಕ ಅನುವಾದ, ಸಹಜ ಮಾರ್ಗಮು ಪತ್ರಿಕೆ, ಎಖೋಸ್ ವಾರ್ತಾಪತ್ರ, ಅಡಿಬರಹಗಳು, ಇತರೆ, ಸ್ವರ್ಣ ಸಂಚಿಕೆ, ತಾಂತ್ರಿಕ, ಆಡಿಯೋ ಪುಸ್ತಕಗಳು, ವ್ಯವಸ್ಥಾಪನೆ ಮತ್ತು ಮಾರಾಟ/ಪ್ರಚಾರ. ಪ್ರತಿಯೊಂದು ತಂಡದಲ್ಲಿ ಕೆಲವು ಆಯೋಜಕರು, ಅನುವಾದಕರು, ಪರಿಶೀಲಕರು, ತಿದ್ದುಪಡಿಗಾರರು ಮತ್ತು ತಂತ್ರಜ್ಞರು ಇರುತ್ತಾರೆ. ಮರುದಿನ, ಈ ತಂಡಗಳು ಪರಸ್ಪರ ಚರ್ಚೆ ನಡೆಸಿ, ಮುಂದಿನ ಒಂದು ತಿಂಗಳಿನ ಯೋಜನೆಯನ್ನು ಸಿದ್ಧಪಡಿಸಿದರು. ಈ ತಂಡಗಳಿಗಾಗಿ ಪ್ರಶಿಕ್ಷಣ ಕಾರ್ಯಕ್ರಮಗಳನ್ನು ಸಹ ನಡೆಸಲಾಗುವುದು.

ಪರಸ್ಪರ ಸಂಪರ್ಕವನ್ನು ಕಾಯ್ದುಕೊಳ್ಳಲು ಎಲೆಕ್ಟ್ರಾನಿಕ್ ವೇದಿಕೆಯನ್ನು ರೂಪಿಸಲಾಗಿದ್ದು, ಅದರಲ್ಲಿ ಕಾರ್ಯಸಂಬಂಧಿ ಚರ್ಚೆಗಳು, ವಿಚಾರಣೆಗೆ ಪರಿಹಾರ ಮತ್ತು ಅನುಭವ ಹಂಚಿಕೆ ಸಾಧ್ಯವಾಗುತ್ತದೆ. ಅಮಿತೋತ್ಸಾಹ ತೋರಿದ ಭಾಗಿಗಳು ಕಾರ್ಯಸಾಧನೆಯಲ್ಲಿ ತಾವು ಪಾಲುದಾರರೆಂಬ ಹೆಮ್ಮೆಯೊಂದಿಗೆ ಮರಳಿದರು.

## ಸ್ಥಳೀಯ ಕೂಟಗಳು

### ಕೊಲ್ಹಾಪುರ, ಮಹಾರಾಷ್ಟ್ರ

ನವೆಂಬರ್ 16ರಂದು ಮೊದಲ ಬಾರಿಗೆ ಕೊಲ್ಹಾಪುರದಲ್ಲಿ ನಡೆದ ಕೂಟದಲ್ಲಿ ಕೊಲ್ಹಾಪುರ, ಸತಾರಾ, ಕರಾಡ್, ಮೀರಜ್, ಕುರ್ಲಾಪ್, ರತ್ನಗಿರಿ, ಸಾವಂತವಾಡಿ ಮತ್ತು ಸಾಂಗ್ಲಿಯ 200 ಅಭ್ಯಾಸಿಗಳು ಹಾಗು 25 ಮಕ್ಕಳು ಭಾಗವಹಿಸಿದ್ದರು. ವಲಯ ಉಸ್ತುವಾರಿಯಾದ ಸೋ.ಸುಭಾಷ್ ವೈದ್ಯರವರು ಸತ್ಸಂಗದ ನಂತರ ಮಾತನಾಡಿದರು. ಸಮೀಪದ ಎಲ್ಲ ಕೇಂದ್ರಗಳ ಪ್ರಶಿಕ್ಷಕರು ಉಪಸ್ಥಿತರಿದ್ದರು. ಪ್ರತಿಯೊಬ್ಬರು ತಮಗೆ ನೀಡಲಾದ ವಿಷಯದ ಬಗ್ಗೆ ಮಾತನಾಡಿದರು.

ಉಪನ್ಯಾಸಗಳು ಸುರಚಿತ ಹಾಗು ಪ್ರೇರಣಾದಾಯಕವಾಗಿದ್ದುವು. ಸಾಧನೆಯ ಮೇಲೆ ಇವು ಹೊಸ ಬೆಳಕು ಚೆಲ್ಲಿದುವು. ಸಹಜಮಾರ್ಗ ಸಾಧನೆಯ ಅರಿವನ್ನು ಇವು ಅದಿಕಗೊಳಿಸಿದುವೆಂದು ಹೊಸದಾಗಿ ಸೇರಿದ ಅಭ್ಯಾಸಿಗಳು ಅಭಿಪ್ರಾಯ ಪಟ್ಟರು.

### ತಂಜಾವೂರು, ತಮಿಳುನಾಡು

ನವೆಂಬರ್ 29 ಮತ್ತು 30ರಂದು ತಂಜಾವೂರಿನ ಜೆನ್‌ಬಾಗಪುರಂ ಆಶ್ರಮದಲ್ಲಿ 'ಸಹಜಮಾರ್ಗ ಸಾಧನೆ ಮತ್ತು ಸಹಜಮಾರ್ಗದಲ್ಲಿ ಅಭ್ಯಾಸಿಗಳ ಪಾತ್ರ' ಕುರಿತು ಎರಡು ದಿನಗಳ ವಸತಿಸಹಿತ ಕಾರ್ಯಕ್ರಮವನ್ನು ತಮಿಳಿನಲ್ಲಿ ನಡೆಸಲಾಗಿದ್ದು, 64 ಅಭ್ಯಾಸಿಗಳು ಮತ್ತು 16 ವ್ಯವಸ್ಥಾಪಕರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಸಹಜಮಾರ್ಗ ಸಾಧನೆ, ಚಾರಿತ್ರ್ಯ ನಿರ್ಮಾಣ, ಎಸೊಟೆರಿಕ್ ಚಿಹ್ನೆ ಮತ್ತು ಸಹಜಮಾರ್ಗ ಜೀವನವಿಧಾನದ ಪ್ರಾಯೋಗಿಕ ಅಳವಡಿಕೆಯನ್ನು ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು.

ಕಾರ್ಯಕ್ರಮವು ಸತ್ಸಂಗದೊಡನೆ ಪ್ರಾರಂಭವಾಯಿತು. ಪ್ರಾರಂಭಿಕ ಉಪನ್ಯಾಸದಲ್ಲಿ ಸಹಜಮಾರ್ಗ ಸಾಧನೆಯ ಪ್ರಾಮುಖ್ಯತೆ, ಸ್ವತಃ ತನ್ನೆಡೆಗೆ ಅಭ್ಯಾಸಿಯ ಜವಾಬ್ದಾರಿ ಮತ್ತು ಸಮತೋಲಿತ ಮನಃಸ್ಥಿತಿಯನ್ನು ಪಡೆಯುವುದರ ಬಗ್ಗೆ ಹೇಳಲಾಯಿತು. ಕಾರ್ಯಕ್ರಮದಲ್ಲಿ, ಪ್ರತಿಯೊಬ್ಬರಿಗೂ ಸಾಧನೆಯ ಕೈಪಿಡಿಗಳು ಮತ್ತು ಸಹಜಮಾರ್ಗ ಸಾಧನೆಯ ಬಗೆಗಿನ ಸಂಪೂರ್ಣ ವಿವರಗಳ ಪುಸ್ತಕಗಳನ್ನು ವಿತರಿಸಲಾಗಿತ್ತು. ಪ್ರತಿ ವ್ಯವಸ್ಥಾಪಕರಿಗೆ ಐದು ಅಭ್ಯಾಸಿಗಳ ಗುಂಪನ್ನು ನೀಡಲಾಗಿದ್ದು, ಪ್ರತಿ ವಿಷಯವನ್ನು ಅವರು ವಿಷದವಾಗಿ ಚರ್ಚಿಸಿ ಸಂದೇಹಗಳನ್ನು ನಿವಾರಿಸಿದರು ಮತ್ತು ಸಮೂಹ ಚರ್ಚೆಗಳಲ್ಲಿ ಪಾಲ್ಗೊಂಡರು. ಗುರುಗಳ ಉಪನ್ಯಾಸದ ವಿಡಿಯೊ ಪ್ರದರ್ಶಿಸಲಾಯಿತು. ಸತ್ಸಂಗದೊಡನೆ ಕಾರ್ಯಕ್ರಮವು ಮುಕ್ತಾಯಗೊಂಡಿತು.



## ಚುಟುಕು ವಾರ್ತೆಗಳು

### ಹುಬ್ಬಳ್ಳಿ, ಉ.ಕರ್ನಾಟಕ

'ಮಕ್ಕಳ ಪಾಲನೆ ಮತ್ತು ಸಂಬಂಧಗಳು' ವಿಷಯದ ಬಗ್ಗೆ ಡಿಸೆಂಬರ್ 14ರಂದು ಸಭೆಯೊಂದನ್ನು ನಡೆಸಲಾಯಿತು. ಹುಬ್ಬಳ್ಳಿ, ಕಲ್ಲೂರು, ಧಾರವಾಡ, ನವನಗರ ಮತ್ತು ಕಡಪಟ್ಟಿಯಿಂದ 70ಕ್ಕೂ ಅಧಿಕ ಅಭ್ಯಾಸಿಗಳು ಹಾಜರಿದ್ದರು.


ಹುಬ್ಬಳ್ಳಿ

### ಕೇಂದ್ರಗಳ ಭೇಟಿ, ತಮಿಳುನಾಡು

ಅಕ್ಟೋಬರ್ 19ರಂದು, ಕರುಮಾತಂಪಟ್ಟಿಯ 14 ಅಭ್ಯಾಸಿಗಳು ಕೂನೂರು ಮತ್ತು ಊಟಿ ಕೇಂದ್ರಗಳಿಗೆ ಭೇಟಿ ನೀಡಿದರು. ಸತ್ಸಂಗದ ನಂತರ ಅಭ್ಯಾಸಿಗಳು ನಿಯಮಿತ ಸಾಧನೆ ಮತ್ತು ಗುರುಗಳೆಡೆಗೆ ಪ್ರೇಮ ಬೆಳೆಸಿಕೊಳ್ಳುವುದರ ಬಗ್ಗೆ ಚರ್ಚಿಸಿದರು. ಕೂನೂರು ಮತ್ತು ಊಟಿ ಅಭ್ಯಾಸಿಗಳ ಆತಿಥ್ಯಕ್ಕೆ ಅವರು ಮನಸೋತರು.


ಊಟಿ


ಗೋಲ ಗೋಕರ್ಣನಾಥ್

### ವೆಲ್ಲೂರು, ತಮಿಳುನಾಡು

ನವೆಂಬರ್ 8 ಮತ್ತು 9ರಂದು, ವೆಲ್ಲೂರಿನ ವಾದವಿರಿಂಚಿಪುರಂನಲ್ಲಿ 'ನಿರಂತರ ಸ್ಮರಣೆ'ಯ ಬಗ್ಗೆ ಎರಡು ದಿನಗಳ ಕಾರ್ಯಕ್ರಮವನ್ನು ನಡೆಸಲಾಯಿತು. ಸಮೀಪದ ಕೇಂದ್ರಗಳಿಂದ ಸುಮಾರು 24 ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡರು.


ವೆಲ್ಲೂರು



ವಡೋದರ

### ಗೋಲ ಗೋಕರ್ಣನಾಥ, ಉತ್ತರ ಪ್ರದೇಶ

ಪುರುಷೋತ್ತಮ ಬಾಲ ವಿದ್ಯಾ ಮಂದಿರ ಶಾಲೆಯಲ್ಲಿ ಶಿಕ್ಷಕರ ಪ್ರಶಿಕ್ಷಣಾ ಕಾರ್ಯಕ್ರಮವನ್ನು ನಡೆಸಲಾಯಿತು. ನೇತಾಜಿ ಸುಭಾಷ್‌ಚಂದ್ರ ಬೋಸ್ ಶಾಲೆ ಮತ್ತು ಪುರುಷೋತ್ತಮ ಬಾಲ ವಿದ್ಯಾ ಮಂದಿರ ಶಾಲೆಯ 23 ಶಿಕ್ಷಕರು ಪಾಲ್ಗೊಂಡರು.

### ವಡೋದರ, ಗುಜರಾತ್

ಅಲಕಾಪುರಿಯ ಬರೋಡ ಪ್ರೌಢಶಾಲೆಯಲ್ಲಿ ಹಿರಿಯ ಮಾಧ್ಯಮಿಕ ತರಗತಿಗಳಿಗಾಗಿ ಮೌಲ್ಯಗಳು ಮತ್ತು ನಾಯಕತ್ವಗಳ ಕುರಿತ ಕಾರ್ಯಕ್ರಮಗಳನ್ನು ನಡೆಸಲಾಯಿತು. ತಮ್ಮ ಆತ್ಮವಿಶ್ವಾಸವನ್ನು ವೃದ್ಧಿಸಿದ , ಆತ್ಮಗೌರವ ಹಚ್ಚಿಸಲು ಸಹಕಾರಿಯಾದ ಈ ಪ್ರತಿಸ್ಪಂದನ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಶ್ಲಾಘಿಸಿದರು.

## ಗ್ರೌಂಡಿಂಗ್ ಇನ್ ಪ್ರಾಕ್ಟೀಸ್ – ತರಬೇತಿ ಕಾರ್ಯಕ್ರಮಗಳು

ಭಾರತದಾದ್ಯಂತ ನಡೆದ GITP ಕಾರ್ಯಕ್ರಮಗಳ ಚಿತ್ರಗಳನ್ನು ಇಲ್ಲಿ ಕಾಣಬಹುದು.


ಜೋಧಪುರ


ಸಿರ್ಸಿ


ಪಟಿಯಾಲ


ಸಿರೋಹಿ


ಗೋವಾ


ಪಾಲಕ್ಕಾಡ್

## ಸತುಪಲ್ಲಿ ಆಶ್ರಮ, ತೆಲಂಗಾಣ

ಪ್ರಭಾ ಕೇಂದ್ರ






ಸತುಪಲ್ಲಿಯು ತೆಲಂಗಾಣ ರಾಜ್ಯದ ಖಮ್ಮಂ ಜಿಲ್ಲೆಯಲ್ಲಿನ ಒಂದು ಪಟ್ಟಣ. ಇದು ವಿಜಯವಾಡದಿಂದ ಸುಮಾರು 100 ಕಿ.ಮೀ.ದೂರದಲ್ಲಿದೆ. ಸಮೀಪದ ರೇಲ್ವೆನಿಲ್ದಾಣವು ವಿಜಯವಾಡ ಮತ್ತು ವಾರಂಗಲ್ ನಡುವೆ ಸ್ಥಿತವಾದ ಖಮ್ಮಂ ಜಿಲ್ಲಾಕೇಂದ್ರದಲ್ಲಿದೆ.

80ರ ದಶಕದಲ್ಲಿ ಸುಮಾರು ಹತ್ತು ಅಭ್ಯಾಸಿಗಳು ಸತುಪಲ್ಲಿಯಲ್ಲಿ ಸಹಜಮಾರ್ಗವನ್ನು ಅನುಸರಿಸುತ್ತಿದ್ದರು. 1990ರಲ್ಲಿ, ಪ್ರಶಿಕ್ಷಕ ಸೋ. ಸೂರ್ಯ ಭಾಸ್ಕರಂರವರು ಖಮ್ಮಂನ ಬೇಲಂಪಲ್ಲಿಯಿಂದ ಕೋತಗುಡಂಗೆ ವರ್ಗವಾದರು. ಅವರು ಸತುಪಲ್ಲಿಯ ಅಭ್ಯಾಸಿಗಳನ್ನು ಭೇಟಿಯಾಗಲು ಸುಮಾರು 60 ಕಿ.ಮೀ. ಪ್ರಯಾಣಿಸಿ ಬರುತ್ತಿದ್ದರು. ಅವರ ಸತತ ಭೇಟಿಗಳಿಂದ 1997–98ರ ಸಮಯದಲ್ಲಿ ಅಭ್ಯಾಸಿಗಳ ಸಂಖ್ಯೆ ಹತ್ತರಿಂದ ಇಪ್ಪತ್ತಕ್ಕೇರಿತು.

ಖಮ್ಮಂನಿಂದ ರಾಜಮಂಡ್ರಿಯ ಹಾದಿಯಲ್ಲಿ ಪಟ್ಟಣ ಕೇಂದ್ರದಲ್ಲಿ ಅಭ್ಯಾಸಿಯೋರ್ವರು ಸುಮಾರು 278 ಚ.ಗಜ ಜಮೀನನ್ನು ಆಶ್ರಮ ನಿರ್ಮಾಣಕ್ಕಾಗಿ ದೇಣಿಗೆ ನೀಡಿದರು. ಫೆಬ್ರುವರಿ 26, 1992ರಂದು ಜಮೀನು ಶ್ರೀ ರಾಮಚಂದ್ರ ಮಿಷನ್ನಿನ ಹೆಸರಿಗೆ ನೋದಣಿಯಾಯಿತು. ಆರ್‌ಸಿಸಿ ಛಾವಣಿಯೊಂದಿಗೆ ನಿರ್ಮಿಸಿದ ಆಶ್ರಮವು ಸ್ಥಳೀಯ ಅಭ್ಯಾಸಿಗಳ ಸಹಕಾರದಿಂದ 1998ರಲ್ಲಿ ಸಂಪೂರ್ಣಗೊಂಡಿತು. ಆಶ್ರಮದ ವಿಸ್ತೀರ್ಣವು – ಧ್ಯಾನಮಂದಿರ(545 ಚ.ಅ.), ಪಾಕಶಾಲೆ (200 ಚ.ಅ.) – ಒಟ್ಟು 2502 ಚ.ಅಡಿಯಷ್ಟಿದೆ. ಕಂಪ್ಯೂಟರ್, ಪ್ರಿಂಟರ್ ಮತ್ತು ಅಂತರ್ಜಾಲ ಸಂಪರ್ಕ ಸಹಿತ ವಾಚನಾಲಯವು ಸುವ್ಯವಸ್ಥಿತವಾಗಿದೆ. ಜೂನ್ 27, 1994ರಲ್ಲಿ ಸೋ. ಎಸ್.ಎ.ಸರ್ನಾಡರವರು ಆಶ್ರಮವನ್ನು ಉದ್ಘಾಟಿಸಿದರು. 2011ರಲ್ಲಿ ತಾರಸಿಯ ಮೇಲೆ ಎರಡು ಕೋಣೆಗಳು ಮತ್ತು ಒಂದು ತೆರೆದ ಹಜಾರ ಮತ್ತು ಪಾಕಶಾಲೆಯ ಉಗ್ರಾಣವನ್ನು ನಿರ್ಮಿಸಲಾಯಿತು. ಅದನ್ನು ಫೆಬ್ರುವರಿ 2, 2011ರಂದು ಉದ್ಘಾಟಿಸಲಾಯಿತು.

ಸುಮಾರು ನಲವತ್ತು ಅಭ್ಯಾಸಿಗಳು ಅದೇ ಓಣಿಯಲ್ಲಿ ವಾಸವಾಗಿದ್ದು, ಮುಂಜಾನೆ 5ಗಂಟೆ, 9ಗಂಟೆ ಮತ್ತು ಸಂಜೆ 5ಗಂಟೆಯ ಸತ್ಸಂಗಗಳಿಗೆ ಪ್ರತಿದಿನ ಹಾಜರಾಗುತ್ತಾರೆ. ಪ್ರತಿದಿನ ಬೆಳಿಗ್ಗೆ 11 ಗಂಟೆಯಿಂದ 1 ಗಂತೆಯುವರೆಗೆ ಆಶ್ರಮದಲ್ಲಿ ವಿಸ್ಪರ್ಸ್ ಸಂದೇಶಗಳನ್ನು ಓದಲಾಗುತ್ತದೆ.

ಖಮ್ಮಂ ಮತ್ತು ಕೊತ್ತಗೂಡಂ ಕೇಂದ್ರಗಳಿಂದ ಪ್ರಶಿಕ್ಷಕರು ವೈಯಕ್ತಿಕ ಬೈಠಕು ನೀಡಲು ಮತ್ತು ಪುರ್ಣ ದಿನದ ಕಾರ್ಯಕ್ರಮಗಳನ್ನು ನಡೆಸಲು ಭೇಟಿ ನೀಡುತ್ತಿರುತ್ತಾರೆ.

ಪ್ರಸ್ತುತ ಅಭ್ಯಾಸಿಗಳ ಸಂಖ್ಯೆ 80ಕ್ಕಿಂತ ಅಧಿಕವಾಗಿದೆ. 2013ರ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ನಡೆದ GITP ಕಾರ್ಯಕ್ರಮಗಳಲ್ಲಿ ಹೊಸ ಅಭ್ಯಾಸಿಗಳ ಸಹಿತ ಎಲ್ಲರೂ ಭಾಗವಹಿಸಿದ್ದಾರೆ.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. “Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.